ವಿದ್ಯಾ ಪರಾ ದೇವತಾ

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಏಪ್ರಿಲ್ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 8
ಪುಟ : 12
ಬೆಲೆ : ₹ 5/-






A Journal of Karnataka State Secondary Teachers' Association

# ಸಂಪಾದಕೀಯ...

ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷಕೆ ಹೊಸತು ಹೊಸತು ತರುತಿದೆ

ಹೌದು...... ನಂದನ ಸಂವತ್ಸರ ಉರುಳಿದೆ ... ವಿಜಯ ನಾಮ ಸಂವತ್ಸರ ಬರುತ್ತಿದೆ. ಈ ಸಂವತ್ಸರವು ಹೆಸರಿಗೆ ಅನುಗುಣವಾಗಿ ನಮ್ಮೆಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರಿಗೆ ವರ್ಷವಿಡೀ ವಿಜಯದ ಹೊಳೆಯನ್ನೇ ಹರಿಸಲಿ ಎಂದು ಆಶಿಸುತ್ತೇವೆ. ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಮಾರ್ಚ್ ತಿಂಗಳಲ್ಲಿ ಪಿ. ಯು. ಸಿ. ಹಾಗೂ 1 ರಿಂದ 9ನೇ ತರಗತಿಯ ಪರೀಕ್ಷೆಗಳೆಲ್ಲಾ ಮುಗಿದಿದೆ. ಏಪ್ರಿಲ್ ಮೊದಲಲ್ಲೇ ಎಸ್.ಎಸ್.ಎಲ್.ಸಿ. ಪರೀಕ್ಷೆಯೂ ಮುಗಿಯುತ್ತದೆ. ಎಸ್.ಎಸ್.ಎಲ್.ಸಿ. ಹಾಗೂ ಪಿ. ಯು. ಸಿ. ವಿದ್ಯಾರ್ಥಿಗಳಿಗೆ, ಪೋಷಕರಿಗೆ ವಿಶೇಷವಾಗಿ ಹೆಚ್ಚು ಆತಂಕ. ನಮ್ಮ ಫಲಿತಾಂಶ ಏನಾಗುವುದೋ ? ನಾವು ಬರೆದ ಉತ್ತರಕ್ಕೆ ತಕ್ಕ ಪ್ರತಿಫಲ ಸಿಕ್ಕುವುದೇ ಎಂಬ ಆತಂಕ. ಕಾರಣ ಮೌಲ್ಯಮಾಪನದಲ್ಲಿ ಹಲವಾರು ತಪ್ಪುಗಳಾಗಿವೆ. ಎನ್ನುವ ವಿಚಾರ. ಈ ವರ್ಷ ಅಂತಹ ಯಾವುದೇ ದೋಷಗಳಾಗದೆ. ಮೌಲ್ಯಮಾಪನ ಕಾರ್ಯ ಯಶಸ್ವಿಯಾಗುತ್ತದೆ. ಎನ್ನುವ ವಿಶ್ವಾಸ ಶಿಕ್ಷಕ ಸಮಾಚಾರದ್ದು.

ಏಪ್ರಿಲ್ ಮತ್ತು ಮೇ ತಿಂಗಳು ಬೇಸಿಗೆ ರಜೆಯ ಅವಧಿ ರಜೆಯನ್ನು ನಮ್ಮ ಶಿಕ್ಷಕ ಮಿತ್ರರು ಸಂತೋಷವಾಗಿ ಕಳೆಯಲೆಂದು ಆಶಿಸುತ್ತೇವೆ.

ಶಿಕ್ಷಕ ಸಮಾಚಾರ ನಿಮ್ಮ ಪತ್ರಿಕೆ. ನಿಮ್ಮ ಪತ್ರಿಕೆಗೆ ವೈಚಾರಿಕ ಲೇಖನಗಳನ್ನು ಬರೆದು ಕಳುಹಿಸುವುದರ ಮೂಲಕ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿನಂತಿಸಲಾಗಿದೆ.

ಇಂತು ನಿಮ್ಮ ವಿಶ್ವಾಸಿ
ಸಂಪಾದಕ



# ವಿವೇಕ ವಾಣಿ




ಪ್ರಪಂಚಕ್ಕೆ ಬೇಕಾಗಿರುವುದು ಚಾರಿತ್ರ್ಯ. ಯಾರ ಜೀವಿತವು ಪ್ರಜ್ವಲಿಸುತ್ತಿರುವ ಪ್ರೇಮ ಮತ್ತು ನಿಸ್ವಾರ್ಥತೆಗಳ ಪುಂಜವೋ, ಅಂಥವರನ್ನು ಈ ಪ್ರಪಂಚ ಬಯಸುತ್ತದೆ. ಅಂತಹ ಪ್ರೇಮವು ಪ್ರತಿಯೊಂದು ಪದವನ್ನೂ ಗುಡುಗಿನಿಂದ ಮೊಳಗಿಸುತ್ತದೆ. ನಮಗಿಂದು ಬೇಕಾಗಿರುವುದು ಕೆಚ್ಚೆದೆಯ ಮಾತುಗಳು, ಅದಕ್ಕಿಂತ ಹೆಚ್ಚಾಗಿ ಕೆಚ್ಚೆದೆಯ ಕಾರ್ಯಗಳು. ಏಳಿ, ಎದ್ದೇಳಿ, ಓ ಮಹಾತ್ಮರೇ !

# ಪರಿವಿಡಿ


- ವಿಜಯನಾಮ ಸಂವತ್ಸರ 3
- ಚುನಾವಣೆ ಬಂದಿದೆ 4
- ಕಳಕಳಿಯ ಕರೆ 5
- ಶ್ರೀರಾಮತಾರಕ 6
- ಅಲ್ಲಿ ಸಂಸ್ಕೃತಕ್ಕೆ ಸ್ವಾಗತ, ಆದರೆ ಇಲ್ಲಿ? 8
- ಮಹಿಳಾ ಬ್ಯಾಂಕ್ 11
- ಪೋಷಕರಿಗೆ ಕಿವಿಮಾತು 12
- ಸುದ್ದಿಸಂಗ್ರಹ 13
- ಪ್ರಶ್ನೋತ್ತರ 14
- ದಿನದರ್ಶಿನಿ ಬಿಡುಗಡೆ 14

# ವಿಜಯನಾಮ

# ಹೊಸ ವರುಷದ ಶುಭಾಶಯಗಳು



ಆತ್ಮೀಯರೇ,

ನಂದನನಾಮ ಸಂವತ್ಸರದ ಸೂರ್ಯಾಸ್ತವಾಗಿ ವಿಜಯ ಸಂವತ್ಸರದ ನವ ಸೂರ್ಯೋದಯದೊಂದಿಗೆ ನಮ್ಮ ಹೊಸವರ್ಷವು ಜನ್ಮತಳೆದಿದೆ.

ಹೊಸವರ್ಷ 'ವಿಜಯ' ವು ನಿಮ್ಮ ಬಾಳಿನ ಆಶೋತ್ತರಗಳಿಗೆ ವಿಜಯವನ್ನು ಉಂಟುಮಾಡಲೆಂದು ಸರ್ವಶಕ್ತನಲ್ಲಿ ಪ್ರಾರ್ಥಿಸುತ್ತ, ನಿಮಗೆ ಹೊಸವರ್ಷದ ಶುಭಕಾಮನೆಗಳನ್ನು ಕೋರುತ್ತೇವೆ.

ಈ ವರ್ಷ ಧೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ ಒಂದು ನೂರಐವತ್ತನೇ ಜನ್ಮ ವರ್ಷಾಚರಣೆಯೂ ಹೌದು. ಸ್ವಾಮೀಜಿ ತಮ್ಮ ಜೀವಿತಾವಧಿಯಲ್ಲಿ ಭಾರತದ ಸ್ವಾತಂತ್ರ್ಯದ ಕನಸು ಕಂಡವರಷ್ಟೇ ಅಲ್ಲ. ಅದನ್ನು ನನಸಾಗಿಸಲು ಸಹಸ್ರಾರು ಜನರಿಗೆ ಪ್ರೇರಣೆ ನೀಡಿದವರು. ಉತ್ತಮ ಶಿಕ್ಷಣದಿಂದ ಮಾತ್ರ ರಾಷ್ಟ್ರ ವೈಭವ ಸಾಧ್ಯ ಎಂದು ಬಲವಾಗಿ ನಂಬಿದ್ದವರು. ಇಂಥ ಮಹಾನ್ ಸಂನ್ಯಾಸಿಯ "ಏಳಿ ಎದ್ದೇಳಿ ಗುರಿಮುಟ್ಟುವವರೆಗೂ ನಿಲ್ಲದಿರಿ'. ಎಂಬ ವಾಣಿಯನ್ನು ಅನ್ವರ್ಥಗೊಳಿಸುವ ಸಲುವಾಗಿ ಶಿಕ್ಷಕರಾದ ನಾವು ಮಾಡಬೇಕಾದ ಕೆಲಸ ಬಹಳಷ್ಟಿದೆ. ಈ ದಿಶೆಯಲ್ಲಿ ನಾವೆಲ್ಲರೂ ಕಟಿಬದ್ಧರಾಗಿ ನಿಂತು ರಾಷ್ಟ್ರವನ್ನು ಜಾಗೃತಗೊಳಿಸುವ ಸಂಕಲ್ಪ ಮಾಡೋಣ. ಎಲ್ಲರಿಗೂ ಈ ಕೈಂಕರ್ಯಕ್ಕೆ ಶಕ್ತಿನೀಡಲೆಂದು ತಾಯಿ ಭಾರತಿಯಲ್ಲಿ ಪ್ರಾರ್ಥಿಸುತ್ತ ಶಿಕ್ಷಕ ಸಮಾಚಾರದ ವತಿಯಿಂದ ನಾವು ನಿಮಗೆಲ್ಲರಿಗೂ ಶುಭ ಹಾರೈಸುತ್ತೇವೆ.


**– ಸಂಪಾದಕ ಮಂಡಳಿ**

---

**'ದೇಶವಿದೇಶಗಳಲ್ಲಿನ ನನ್ನ ಸಂಚಾರದ ನಂತರ, ಸಂಘಟನೆಯಿಲ್ಲದೆ ಯಾವುದೇ ಹಿರಿದಾದ ಶಾಶ್ವತ ಕಾರ್ಯವನ್ನೂ ಮಾಡಲಾಗುವುದಿಲ್ಲ ಎಂಬ ನಿಷ್ಕರ್ಷೆಗೆ ನಾನು ಬಂದಿದ್ದೇನೆ.**

**ಪರಸ್ಪರ ಎಷ್ಟೇ ಮತಭಿನ್ನತೆಗಳಿದ್ದರೂ ಅಮರ ಪ್ರೇಮ ಬಂಧನದಿಂದ ಒಂದಾದ ಜನರ ತಂಡವನ್ನು ನಿರ್ಮಿಸುವುದು ಎಂತಹ ಭವ್ಯ ಉದಾತ್ತ ಕಾರ್ಯ!'**

**– ಸ್ವಾಮಿ ವಿವೇಕಾನಂದ**



# ಚುನಾವಣೆ ಬಂದಿದೆ ನಮ್ಮ ಪಾತ್ರ ತಿಳಿಯೋಣ

■ ಎಚ್ಚೆನ್ನಾರ್

ಮತ್ತೊಮ್ಮೆ ನಮ್ಮನ್ನು ಆಳಬೇಕಾದವರನ್ನು ಚುನಾಯಿಸಬೇಕಾದ ಸಮಯ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಆಳರಸರನ್ನು ಆರಿಸಬೇಕಾದ್ದು ಅನಿವಾರ್ಯ. ದುರಂತವೆಂದರೆ ಈ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಘೋಷಣೆ. ಎಲ್ಲಿಯವರೆಗೆ ಪ್ರಭುಗಳು? ನಮ್ಮ ತೋರ್ಬೆರಳಿಗೆ ಮಸಿಬಿದ್ದು ಮತಪತ್ರದ ಮೇಲೆ ನಾವು ಮುದ್ರೆ ಒತ್ತುವವರೆಗೆ ಮಾತ್ರ. ನಂತರ ಮುಂದಿನ ಐದು ವರ್ಷ ನಾವು ದಾಸರೇ! ಅದಕ್ಕಾಗಿ ಮತದಾರ ಪ್ರಭುಗಳಾದ ನಾವು, ಮತದಾನ ಮಾಡಬೇಕಾದ ಈ ಸಮಯದಲ್ಲಿ ಪ್ರಭುಗಳಂತೆಯೇ ವರ್ತಿಸಬೇಕು. ಸಂಸ್ಕೃತದಲ್ಲಿ 'ರಾಜ ಕಾಲಸ್ಯ ಕಾರಣಂ' ಎಂಬ ಮಾತಿದೆ. ಪ್ರಜಾಪ್ರಭುತ್ವದಲ್ಲಿ ಮುಂಬರುವ 5 ವರ್ಷಗಳ ಕಾಲಾವಧಿಯಲ್ಲಿ ನಡೆಯಲಿರುವ ಎಲ್ಲ ಆಗು ಹೋಗುಗಳಿಗೆ ಇಂದಿನ ಪ್ರಭುಗಳಾದ ನಾವೇ ಕಾರಣ ಕರ್ತರು, ಎಂಬುದೇ ಈ ಮಾತಿನ ಅರ್ಥ.

ಸಾಮಾನ್ಯವಾಗಿ ಮತದಾರರ ಸ್ವಭಾವವೇನು? ಹಲವರದ್ದು ಹಲವು ರೀತಿ. ಕೆಲವರು "ಯಾರು ಬಂದರೂ ಇಷ್ಟೇ ಎಲ್ಲರನ್ನೂ ನೋಡಿದ್ದಾಯ್ತು" ಎಂದು ಗೊಣಗುತ್ತ ಮನೆಯಲ್ಲಿ ಕೂರುವುದು. ಇಲ್ಲ ನಾನೊಬ್ಬ ಮತದಾನ ಮಾಡದಿದ್ದರೆ ಏನಂತೆ ಎಂದು ನಿರ್ಲಿಪ್ತತೆಯಿಂದ ಇರುವುದು. ಮತ್ತೆ ಕೆಲವರು, "ಇವರನ್ನು ಎಲೈಟ್ ಎಂದು ಕರೆಯೋಣ– ಮತದಾನ ಮಾಡುವುದು. ಅಂತಸ್ತಿಗೆ ಕಡಿಮೆ ಎಂದು ಹೆಮ್ಮೆಯಿಂದ ಎದೆಚಾಚಿ ಹಿಗ್ಗುವುದು". ಈ ಎರಡೂ ಬಗೆಯ ಜನ ಸುಶಿಕ್ಷಿತರೇ, ಇವರಲ್ಲಿ ತಥಾಕಥಿತ ಬುದ್ಧಿ ಜೀವಿಗಳೆಂದು ಕರೆಸಿಕೊಳ್ಳುವ ಉಪನ್ಯಾಸಕರು, ಪ್ರಾಧ್ಯಾಪಕರು, ಸಾಹಿತಿಗಳು, ವೈದ್ಯರು, ಹಿರಿಯ ಉದ್ಯಮಿಗಳು ಮುಂತಾದವರು ಸೇರುತ್ತಾರೆ. ಚುನಾವಣೆಯ ಪರಿಣಾಮ ಬಂದಾಗ ಮಾತ್ರ, ಮುಂದಿನ 5 ವರ್ಷಗಳವರೆಗೆ, ಮಾಧ್ಯಮಗಳಲ್ಲಿ, ಟಿ.ವಿಗಳಲ್ಲಿ, ಸಭೆಸಮಾರಂಭಗಳಲ್ಲಿ ಇವರ ಟೀಕೆ ಟಿಪ್ಪಣಿಗಳ ಆಟೋಟಕ್ಕೆ ಅಂಕೆಯೇ ಇಲ್ಲ.

ನಿಜವಾಗಿ ಮತದಾನಕ್ಕೆ ಕ್ಯೂ ನಿಲ್ಲುವ ಮಂದಿ ಕಾರ್ಮಿಕರು, ಸ್ಲಂವಾಸಿಗಳು, ಅಲ್ಪ ಸ್ವಲ್ಪ ಮಧ್ಯಮ ವರ್ಗದವರು, ತಮ್ಮ ಸ್ವಜಾತಿಯ ಬಗ್ಗೆ ಹೆಮ್ಮೆ ಪಟ್ಟು ತಮ್ಮವನೇ ಚುನಾಯಿತನಾಗಲೆಂದು ಬಯಸುವವರು. ಈ ಗುಂಪಿನಲ್ಲಿ ಬಹಳಷ್ಟು ಜನರು ತಮ್ಮನ್ನು ಪ್ರಭುಗಳೆಂದು ಪರಿಗಣಿಸಿಯೇ ಇಲ್ಲ. ಇವರು ಎಂದೆಂದೂ ದಾಸರೇ. ಚುನಾವಣೆಗೆ ಮುನ್ನ ಆಮಿಷಗಳಿಗೆ, ಮದಿರೆ, ಬಾಡೂಟಕ್ಕೆ, ವಾಚು, ಉಂಗುರಗಳಿಗೆ ಕೊನೆಗೆ ಸ್ವಜಾತಿ ಪ್ರೇಮಕ್ಕೆ. ಚುನಾವಣೆಯ ನಂತರವಂತು ದಾಸಾನುದಾಸರೆ!

ಪ್ರಜಾಪ್ರಭುತ್ವದ ಪ್ರಕ್ರಿಯೆಯೇ ಹೀಗಿರುವಾಗ ಉತ್ತಮವಾದುದನ್ನು ಬಯಸುವುದಾದರೂ ಹೇಗೆ? ಬಾವಿಯಲ್ಲಿರುವುದೇ ತಾನೇ ಬಿಂದಿಗೆಯಲ್ಲಿ ಬರುವುದು? ಬಿತ್ತದ್ದೂ ತಾನೇ ಬೆಳೆಯುವುದು? ಹೌದು, ಆಟದ ನಿಯಮಗಳಿಗನುಗುಣವಾಗೇ ಆಟ ಆಡಬೇಕು. ಆಟದ ನಿಯಮಗಳು ಬದಲಾಗುವವರೆಗೆ ಇದೇ ರೀತಿ ಮುಂದುವರೆಸಬೇಕು. ಅದರ ಫಲವನ್ನು ಅನುಭವಿಸಬೇಕು.

ಇಷ್ಟೆಲ್ಲವನ್ನೂ ಏತಕ್ಕೆ ಬರೆಯಬೇಕಾಗಿ ಬಂತೆಂದರೆ, ಈ ಚುನಾವಣೆಯ ಆಟದಲ್ಲಿ ಒಂದು ಪ್ರಮುಖ ಪಾತ್ರ ನಮ್ಮ ಶಿಕ್ಷಕರಿಗೂ ಇದೆ. ಶಿಕ್ಷಕರೆಂದರೆ 'ರಾಷ್ಟ್ರ ನಿರ್ಮಾಪಕರು, ಭಾವಿಜನಾಂಗವನ್ನು ರೂಪಿಸುವ ಶಿಲ್ಪಿಗಳು' ಎಂಬೆಲ್ಲಾ ಮಾತು ಸೆಪ್ಟೆಂಬರ್ 5ಕ್ಕೆ ಮಾತ್ರ ಸೀಮಿತವಾಗಬಾರದು. ಅದು ನಿಜಜೀವನದಲ್ಲೂ, ಸದಾ ಕಾಲಕ್ಕೂ ಅನ್ವಯಿಸಬೇಕಾದರೆ ಈ ಕೆಳಕಂಡ ಕೆಲವು ಅಂಶಗಳ ಬಗ್ಗೆ ನಾವು ಗಮನ ಕೊಡಬೇಕಲ್ಲವೇ?

1. ನಾವು ನಮ್ಮ ಮನೆಯವರು ತಪ್ಪದೆ ಮತದಾನ ಮಾಡಬೇಕು.

(7ನೇ ಪುಟಕ್ಕೆ.....)

# ಕಳಕಳಿಯ ಕರೆ

■ ಶ್ವೇತಾದ್ರಿ

'ಶಕ್ತಿಯೇ ಜೀವನ, ದುರ್ಬಲತೆಯೇ ಮರಣ'–ಹೀಗೆ ಹೇಳುವುದರ ಮೂಲಕ ವಿವೇಕಾನಂದರು ಶಕ್ತಿಯ ಮಹತ್ವವನ್ನು ಸಾರಿ ಹೇಳುತ್ತಿದ್ದಾರೆ. ಮುಂದುವರೆದು ಸ್ವಾಮೀಜಿ ಭಾರತೀಯರಿಗೆ ವಿಶೇಷವಾಗಿ ಕಳಕಳಿಯಿಂದ ಹೀಗೆ ಕರೆ ನೀಡುತ್ತಾರೆ.

"ಈಗ ಸಾವಿರಾರು ವರ್ಷಗಳಿಂದ ಭಾರತೀಯರಾದ ನಮ್ಮನ್ನು ಪರಕೀಯರು ಒಂದೇ ಸಮನೆ ನೀವು ದುರ್ಬಲರು, ನೀವು ಅಪ್ರಯೋಜಕರು, ನಿಮಗೆ ವ್ಯಕ್ತಿತ್ವ ಇಲ್ಲ' ಎಂದು ಹೇಳಿ ಹೇಳಿ, ಅದನ್ನು ನೀವು ಕೇಳಿ ಕೇಳಿ, ಈಗ ನಾವು ನಿಜಕ್ಕೂ ದುರ್ಬಲರೇ ಹೌದು ಎಂದು ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದೀರಿ. ನನ್ನ ಈ ಶರೀರ ಕೂಡ ಇದೇ ಭಾರತ ಭೂಮಿಯಲ್ಲಿ ಜನ್ಮ ತಳೆದು ಈ ಅನ್ನವನ್ನೇ ಉಂಡು ಬೆಳೆದಿದೆ. ಆದರೆ ನಾನು ಮಾತ್ರ ಎಂದೆಂದಿಗೂ ಒಂದು ಕ್ಷಣ ಮಾತ್ರವಾದರೂ 'ನಾನು ದುರ್ಬಲ' ಎಂಬ ಭಾವನೆಯನ್ನು ನನ್ನ ಮನದ ಒಳಗೆ ಹೋಗಲು ಬಿಟ್ಟವನಲ್ಲ'. 'ನನ್ನಲ್ಲಿ ನನಗೆ ಮೊದಲಿನಿಂದಲೂ ಅಪರಿಮಿತ ಆತ್ಮವಿಶ್ವಾಸವಿತ್ತು. ಈ ಪ್ರಬಲ ಆತ್ಮವಿಶ್ವಾಸ ದಿಂದಾಗಿ ಮತ್ತು ಭಗವತ್ಕೃಪೆಯಿಂದಾಗಿ ಯಾವ ಪರರಾಷ್ಟ್ರೀಯರು ನಮ್ಮನ್ನು ದುರ್ಬಲರು ದಲಿತರು ಎಂಬ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದರೋ ಅವರೇ ಇಂದು ನನ್ನನ್ನು ಗುರುವಾಗಿ ಸ್ವೀಕರಿಸಿ ಗೌರವಿಸುತ್ತಿದ್ದಾರೆ. ನೀವು ಸಹ ನನ್ನಂತೆಯೇ ಆತ್ಮಶ್ರದ್ಧೆಯುಳ್ಳವರಾದರೆ, ನಿಮ್ಮೊಳಗೂ ಅನಂತ ಬಲವಿದೆ ಎಂದು ನೀವು ದೃಢವಾಗಿ ನಂಬಿದ್ದೇ ಆದರೆ, ನಿಮ್ಮೊಳಗೂ ಅಪರಿಮಿತ ಜ್ಞಾನ, ಅದಮ್ಯ ಶಕ್ತಿ ಅಡಗಿದೆಯೆಂದು ತಿಳಿದುದೇ ಆದರೆ ಮತ್ತು ಶಕ್ತಿಯನ್ನು ಜಾಗೃತಗೊಳಿಸಿಕೊಂಡುದೇ ಆದರೆ ನೀವು ನನ್ನಂತೆಯೇ ಆಗುವಿರಿ. ಅದ್ಭುತಗಳ ಪಾಠವನ್ನು ಕಲಿಸುವುದಕ್ಕಾಗಿಯೇ'. ನನ್ನ ಸ್ವಂತ ಜೀವನದ ಮೂಲಕ ನಿಮಗದನ್ನು ತೋರಿಸಿಕೊಡುವ ಸಲುವಾಗಿಯೇ ನಾನು ನಿಮ್ಮಲ್ಲಿಗೆ ಬಂದಿದ್ದೇನೆ. ನನ್ನಿಂದ ನೀವು ಆ ಪರಮ ಸತ್ಯವನ್ನು ಕಲಿಯಲೇಬೇಕು. ಬಳಿಕ ನೀವು ನಗರದಿಂದ ನಗರಕ್ಕೆ, ಗ್ರಾಮದಿಂದ ಗ್ರಾಮಕ್ಕೆ, ಮನೆಯಿಂದ ಮನೆಗೆ ಹೋಗಿ ಈ ದಿವ್ಯ ಸತ್ಯವನ್ನು ಪ್ರಸಾರ ಮಾಡಬೇಕು. ಹೋಗಿ ಪ್ರತಿಯೊಬ್ಬ ಭಾರತೀಯನಿಗೂ ಸಾರಿ ಹೇಳಿ 'ಏಳಿ' ಎಚ್ಚರಗೊಳ್ಳಿ, ಕನಸು ಕಾಣುತ್ತಾ ಕುಳಿತಿರಬೇಡಿ. ಜಾಗೃತರಾಗಿ, ನಿಮ್ಮೊಳಗಣ ದಿವ್ಯತೆಯನ್ನು ಪ್ರಕಟಗೊಳಿಸಿ'. ಸ್ವಾಮಿ ವಿವೇಕಾನಂದರ ಈ ನೇರ ನುಡಿಗಳು ಎಂಥವರಲ್ಲಾದರೂ ಆತ್ಮವಿಶ್ವಾಸವನ್ನು ತುಂಬುತ್ತದೆ. ಶಕ್ತಿಯನ್ನು ನೀಡುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳು, ಯುವಕರು ಸ್ವಾಮಿಜಿಯವರ ಈ ಕರೆಯಿಂದ ಪ್ರೇರಿತರಾಗಿ ಶಕ್ತಿವಂತರಾದರೆ ಎಲ್ಲಾ ಕ್ಷೇತ್ರಗಳಲ್ಲೂ ಸಮರ್ಥವಾದ, ಸುಂದರವಾದ ಭಾರತ ಕಟ್ಟುವ ಕನಸು ನಿಜವಾಗುವ ಕಾಲ ದೂರವಿಲ್ಲ. ಎಂದು ಆಶಿಸಬಹುದು.

(ಕೃಪೆ: ವಿವೇಕ ಪ್ರಭ)




**ಶಕ್ತಿ, ಶಕ್ತಿ – ಇದನ್ನೇ ಪ್ರತಿ ಪುಟದಲ್ಲಿಯೂ ಉಪನಿಷತ್ತುಗಳು ನನ್ನೊಡನೆ ಮಾತನಾಡುತ್ತಿರುವುದು. ನಾವು ನೆನಪಿಡಬೇಕಾದ ಒಂದು ಮಹತ್ವದ ಸಂಗತಿಯೆಂದರೆ ಇದು. ನನ್ನ ಜೀವನದಲ್ಲಿ ನಾನು ಕಲಿತುಕೊಂಡ ಒಂದು ಮುಖ್ಯವಾದ ಪಾಠವೇ ಇದು. 'ಶಕ್ತಿ', ಅದು ಹೇಳುತ್ತದೆ. 'ಶಕ್ತಿ' ಎಂದು।**

**ಓ ಮನುಷ್ಯನೇ, ದುರ್ಬಲನಾಗಬೇಡ, ಹಾಗಾದರೆ ಮನುಷ್ಯನಲ್ಲಿ ದೌರ್ಬಲ್ಯಗಳೇ ಇಲ್ಲವೇ? ಎಂದು ಮನುಷ್ಯ ಕೇಳುತ್ತಾನೆ. ಹೌದು, ದೌರ್ಬಲ್ಯಗಳಿವೆ ಎನ್ನುತ್ತವೆ ಉಪನಿಷತ್ತುಗಳು. ಆದರೆ ಇನ್ನೂ ಹೆಚ್ಚಿನ ದೌರ್ಬಲ್ಯವು ಅದನ್ನು ಶಮನಗೊಳಿಸಬಲ್ಲುದೇನು ? ನೀವು ಕೊಳೆಯನ್ನು ಕೊಳೆಯಿಂದಲೇ ತೊಳೆಯುವಿರೇನು ? ಪಾಪಪ್ರಜ್ಞೆಯು ಪಾಪವನ್ನು ಹೋಗಲಾಡಿಸುವುದೇನು ? ದೌರ್ಬಲ್ಯವು ದುರ್ಬಲತೆಯನ್ನು ಕಳೆವುದೇನು ? ಶಕ್ತಿ, ಓ ಮಾನವ, ಶಕ್ತಿ– ಇದನ್ನೇ ಉಪನಿಷತ್ತುಗಳು ಹೇಳುವುದು. ಎದ್ದು ನಿಲ್ಲು, ಶಕ್ತಿಶಾಲಿಯಾಗು. – ಸ್ವಾಮಿ ವಿವೇಕಾನಂದ**

# ಶ್ರೀರಾಮತಾರಕ

ಶ್ರೀ ರಾಮಚಂದ್ರನನ್ನು ಎಲ್ಲ ಭಾರತೀಯರು ಮರ್ಯಾದಾ ಪುರುಷೋತ್ತಮನೆಂದು ಭಾವಿಸಿ ಸಹಸ್ರಾರು ವರ್ಷಗಳಿಂದ ಅವನ ಆರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸೂರ್ಯವಂಶದ ಪರಂಪರೆಯಲ್ಲಿ ದಶರಥ ಮಹಾರಾಜನ ಜೇಷ್ಠ ಮಗನಾಗಿ ಜನಿಸಿದ ರಾಮಚಂದ್ರನು ತನ್ನ ಜೀವನ ಯಾತ್ರೆಯಲ್ಲಿ ಆದರ್ಶ ಮಗನಾಗಿ, ಆದರ್ಶ ಪತಿಯಾಗಿ, ಆದರ್ಶ ಸೋದರನಾಗಿ, ಆದರ್ಶ ಗೆಳೆಯನಾಗಿ ಎಲ್ಲಕ್ಕೂ ಮಿಗಿಲಾಗಿ ಆದರ್ಶ ಮಹಾರಾಜನಾಗಿ ಭಾರತೀಯ ಜೀವನ ಮೌಲ್ಯಗಳ ಪ್ರತಿರೂಪನಾಗಿದ್ದಾನೆ. ಇಷ್ಟೇ ಅಲ್ಲ ತನ್ನ ಶತ್ರುವಾದ ರಾವಣನಿಗೆ ಅಂತ್ಯ ಸಂಸ್ಕಾರವನ್ನು ಮಾಡುವುದಿಲ್ಲವೆಂದು ಅವನ ಸ್ವಂತ ಸೋದರನಾದ ವಿಭೀಷಣನು ಹೇಳಿದಾಗ 'ಮರಣಾಂತಾಣಿ ವೈರಾಣಿ' ಅಂದರೆ ಮರಣದೊಂದಿಗೆ ಶತ್ರುತ್ವವು ಅಂತ್ಯವಾಗುತ್ತದೆ. ಆದ್ದರಿಂದ 'ನೀನು ಅಂತ್ಯ ಸಂಸ್ಕಾರ ಮಾಡದಿದ್ದರೆ ನಾನೇ ಮಾಡಬೇಕಾಗುತ್ತದೆ' ಎಂದು ಹೇಳಿ ಒಬ್ಬ ಶತ್ರುವಿನೊಂದಿಗೂ ಆದರ್ಶವನ್ನು ಮೆರೆದಿದ್ದಾನೆ. ಹೀಗಾಗಿಯೇ ಸಾಮಾನ್ಯ ಮಾನವನಾಗಿ ಜನಿಸಿದರೂ, ಅವನನ್ನು ಭಾರತೀಯರು ದೈವತ್ವಕ್ಕೆ ಏರಿಸಿದ್ದಾರೆ. ಕೇವಲ 'ರಾಮ' ಎಂಬ ಎರಡಕ್ಷರವನ್ನು ಜಪಿಸಿ ಕಾಡಿನ ದರೋಡೆಕೋರನೊಬ್ಬ 'ವಾಲ್ಮೀಕಿ' ಎಂಬ ಮಹಾನ್ ಋಷಿಯೇ ಆಗಿ ಆದಿಕಾವ್ಯವನ್ನು ರಚಿಸಿ ಆದಿಕವಿ ಎನಿಸಿಕೊಂಡ. ಶ್ರೀರಾಮನ ಈ ಭವ್ಯ ವ್ಯಕ್ತಿತ್ವವನ್ನು ಕೈಲಾಸಾಧಿಪತಿ ಪರಶಿವನು ಕೊಂಡಾಡಿ ಲೋಕಮಾತೆ ಪಾರ್ವತಿಗೆ ರಾಮತಾರಕ ಮಂತ್ರವನ್ನು ಉಪದೇಶಿಸುತ್ತಾನೆ.

ರಾಮಕೃಷ್ಣ ಮಹಾಸಂಘದಲ್ಲಿ 'ಶ್ರೀರಾಮನಾಮ ಸಂಕೀರ್ತನೆ' ಯು ಒಂದು ಅನುಪಮ ಸಂಪ್ರದಾಯವಾಗಿ ಬೆಳೆದುಬಂದಿದೆ. ಮರ್ಯಾದಾ ಪುರಷೋತ್ತಮನೂ, ಪರಬ್ರಹ್ಮ ಸ್ವರೂಪಿಯೂ ಆದ ಶ್ರೀರಾಮಚಂದ್ರ ಪ್ರಭುವಿನ ಗುಣಗಾನದ ಈ ಸಂಕೀರ್ತನೆಯು ಪ್ರಚಾರಕ್ಕೆ ಬಂದ ಸ್ವಾರಸ್ಯಕರವಾದ ಕಥೆ ಹೀಗಿದೆ. 1909 ರಲ್ಲಿ ಬೆಂಗಳೂರು ರಾಮಕೃಷ್ಣ ಆಶ್ರಮದ ಶುಭಾರಂಭ. ಆ ಸಮಯದಲ್ಲಿ ಆಶ್ರಮದ ಸುತ್ತಮುತ್ತಲಿನ ಚಮ್ಮಾರರು ಮತ್ತು ಇತರ ದಲಿತವರ್ಗದ ಕೆಲವು ಭಕ್ತರು, ಪ್ರತಿ ಭಾನುವಾರ ಆಶ್ರಮದ ಪ್ರಾರ್ಥನಾ ಮಂದಿರದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರದ ಎದುರು ಕುಳಿತು ಸಾಮೂಹಿಕವಾಗಿ 'ರಾಮನಾಮ ಸಂಕೀರ್ತನೆ' ಯನ್ನು ಮಾಡುತ್ತಿದ್ದರು. ಸಮಾರಂಭಕ್ಕೆ ಆಗಮಿಸಿದ್ದ ರಾಮಕೃಷ್ಣ ಮಹಾಸಂಘದ ಆಗಿನ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮೀಜಿ ಬ್ರಹ್ಮಾನಂದಜಿ ಮಹಾರಾಜ್ ಅವರು ಈ ರಾಮನಾಮ ಸಂಕೀರ್ತನೆಯ ಸವಿಯನ್ನು ಉಂಡು ಸಂತೋಷಗೊಂಡರು. ಪೂಜ್ಯರು ಆ ಭಕ್ತರೊಡನೆ ಅತ್ಯಂತ ಪ್ರೀತಿ ಮತ್ತು ವಾತ್ಸಲ್ಯಗಳಿಂದ ನಡೆದುಕೊಳ್ಳುತ್ತಿದ್ದರು. ಇದನ್ನು ಕಂಡು, ಮೇಲ್ವರ್ಗದವರೆಂದು ಕರೆಸಿಕೊಳ್ಳುವ ಭಕ್ತರ ಮನಸ್ಸಿನಲ್ಲಿಂತೂ ಮೇಲು–ಕೀಳುಗಳೆಂಬ ಕಂದಾಚಾರದ ಭಾವನೆ ಮಾಂತುವಾಯಿತು. ನಂತರ ಸ್ವಾಮೀಜಿ ಇಡೀ ದೇಶದ ರಾಮಕೃಷ್ಣ ಆಶ್ರಮದಲ್ಲಿ ಈ ಸಂಕೀರ್ತನೆಯನ್ನು ಪ್ರಾರಂಭಿಸಿದರು. ಹೀಗೆ ಶ್ರೀರಾಮ ಈ ನಾಡಿನ ಸಾಮರಸ್ಯದ ಬುನಾದಿಯಾಗಿದ್ದಾನೆ.



■ ನಾಭೂ

ಬಹುಪ್ರಾಚೀನಕಾಲದಿಂದಲೂ ರಾಮನು ಜನ್ಮ ತಳೆದ ಅಯೋಧ್ಯೆಯಲ್ಲಿ ರಾಮ ದೇಗುಲವಿತ್ತು, ಆದರೆ ವಿದೇಶಿ ಬಾಬರನು ಅದನ್ನು ಒಡೆದುಹಾಕಿದನು. ಮತ್ತೆ ಅಲ್ಲಿ ರಾಮ ಮಂದಿರ ನಿರ್ಮಾಣವಾಗಬೇಕೆಂದು ಸಕಲ ಭಾರತೀಯರ ಇಚ್ಛೆ. ಈ ಇಚ್ಛೆ ಪೂರೈಸಬೇಕಾದರೆ ದೇಶದಲ್ಲಿ ಸಾತ್ವಿಕ ಶಕ್ತಿ ಜಾಗೃತವಾಗಬೇಕು. ಆದಕ್ಕಾಗಿ ಇತ್ತೀಚೆಗೆ ಪ್ರಯಾಗದ ಕುಂಭಮೇಳದಲ್ಲಿ ಸೇರಿದ ಸಹಸ್ರಾರು ಸಾಧುಸಂತರು ಭಾರತೀಯ ಸಮಾಜಕ್ಕೆ 'ಶ್ರೀರಾಮ ಜಯರಾಮ ಜಯ ಜಯ ರಾಮ' ಎಂಬ ರಾಮತಾರಕ ಮಂತ್ರವನ್ನು ಜಪಿಸಲು ಕರೆಕೊಟ್ಟಿದ್ದಾರೆ. ಈ ಮಂತ್ರ ಜಪದಿಂದ ಜಪಿಸುವ ಕುಟುಂಬಕ್ಕೂ ಮಂಗಳಕರ ಮತ್ತು ದೇಶಕ್ಕೂ

(7ನೇ ಪುಟಕ್ಕೆ.....)

4ನೇ ಪುಟದಿಂದ..... **ಚುನಾವಣೆ...**

2 ಮತನೀಡುವಾಗ ಆಸೆ ಆಮಿಷಗಳಿಗೆ ಒಳಗಾಗದೇ ಇದ್ದುದರಲ್ಲಿ ಉತ್ತಮವಾದ ಪಕ್ಷಕ್ಕೆ ಮತ ನೀಡಬೇಕು.

3 ದೇಶದ ಹಿತವನ್ನು, ಭವಿಷ್ಯವನ್ನು ಗಮನದಲ್ಲಿರಿಸಿ ರಾಷ್ಟ್ರೀಯ ಪಕ್ಷಗಳನ್ನೇ ಆರಿಸುವುದು ಉತ್ತಮ. ಪ್ರಾದೇಶಿಕ ಪಕ್ಷಗಳೆಂದು ಅದನ್ನು ಹುಟ್ಟು ಹಾಕಿದವರು ಕೇವಲ ಸ್ವಾರ್ಥಸಾಧಕ ರಾಜಕಾರಣಿಗಳು ಎಲ್ಲದಕ್ಕೂ ಪಶ್ಚಿಮದತ್ತ ಮುಖಮಾಡುವ ನಾವು ಇಂಗ್ಲೆಂಡ್ ಅಮೇರಿಕಾದಲ್ಲಿ ಯಾವ ರೀತಿ ದ್ವಿಪಕ್ಷವು ವ್ಯವಸ್ಥೆ ರಾಷ್ಟ್ರದ ಉನ್ನತಿಗೆ ಕಾರಣವಾಗಿದೆ. ಎಂಬುದನ್ನು ತಿಳಿದು ಕೊಳ್ಳಬೇಕು.

4. ನಮ್ಮ ಬಂಧುಗಳು, ಸುತ್ತಮುತ್ತಲಿನವರೆಲ್ಲರಲ್ಲೂ ಈ ಬಗ್ಗೆಯ ಜಾಗೃತಿಯನ್ನು ಮೂಡಿಸಲು ಶ್ರಮಿಸಬೇಕು.

5. ನಮ್ಮನ್ನು ಚುನಾವಣಾಧಿಕಾರಿಗಳೆಂದು ಆಯ್ಕೆ ಮಾಡಿದ್ದರೆ. ಆ ಕೆಲಸವನ್ನು ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಅನೇಕ ಬಾರಿ ಚುನಾವಣಾ ಅಧಿಕಾರಿಗಳಿಂದಲೇ ವ್ಯವಸ್ಥೆ ಭ್ರಷ್ಟವಾದುದನ್ನು ಓದಿದ್ದೇವೆ, ಕೇಳಿದ್ದೇವೆ. ಆದುದರಿಂದ ಮತಕೇಂದ್ರದ ಪಾವಿತ್ರ್ಯವನ್ನು ಕಾಪಾಡುವುದು ನಮ್ಮ ಹೊಣೆ ಅಲ್ಲಿ ಯಾವುದೇ ಆಸೆ ಆಮಿಷಗಳಿಗೆ ಒತ್ತಡಗಳಿಗೆ ನಾವು ಬಲಿಯಾಗದಿರುವ ಸಂಕಲ್ಪ ಮಾಡಬೇಕು.

6 'ವೋಟ್ ವಿ ಮಸ್ಟ್ 'ಎಂಬ ಮಾತನ್ನು ಎಲ್ಲೆಡೆ ಪ್ರಚಾರ ಮಾಡಬೇಕು. ಇದು ನಮ್ಮ ಕರ್ತವ್ಯವೂ ಹೌದು ಬಾಧ್ಯತೆಯೂ ಹೌದು.

7 ನಾವು ಶಿಕ್ಷಕರು ಸಮಾಜವನ್ನು ಒಗ್ಗೂಡಿಸುವ ಬಾಧ್ಯತೆ ಇರುವವರು. ರಾಜಕಾರಣಿಗಳಾದರೋ ಸ್ವಹಿತಕ್ಕಾಗಿ ಸಮಾಜವನ್ನು ಒಡೆಯುವುದನ್ನು ಗುರಿಯಾಗಿ ಹೊಂದಿರುವವರು. ಅವರ ಪ್ರಯತ್ನ ನಿಷ್ಫಲಗೊಳಿಸುವುದೆ ನಮ್ಮ ಜೀವನ ಧ್ಯೇಯವಾಗಬೇಕು. ನಾವೆಲ್ಲ ಜಾತಿಕುಲಭಾಷೆ ಮುಂತಾದ ವಿಘಟನೆಯ ವಿಷಯಗಳಿಂದ ದೂರವಿದ್ದು, ಜೋಡಣೆಯ ಮಾಧ್ಯಮವಾಗಬೇಕು.

8 ಇಂದು ದೇಶ ಇರುವ ಪರಿಸ್ಥಿತಿಯನ್ನು ಗಮನಿಸಿ. ದೇಶವು ಸುತ್ತಲೂ ಶತ್ರುಗಳಿಂದ ಸುತ್ತುವರೆಯಲ್ಪಟ್ಟಿದೆ. ದೇಶದೊಳಗಡೆ ಕುಟ್ಟೆ ಹುಳುವಿನಂತೆ ಬಾಧಿಸುತ್ತಿರುವ ನಕ್ಸಲರು, ಭಯೋತ್ಪಾದಕರು, ಸ್ವಾರ್ಥಿ ಸಮಯ ಸಾಧಕರಿಂದ ದೇಶವಿಂದು ಅಪಾಯ ಸ್ಥಿತಿಯಲ್ಲಿ ಇದೆ. ಇದನ್ನು ಮನಗಂಡು ಈ ಸಂಕಟವನ್ನು ನಿವಾರಿಸಿ, ಸಶಕ್ತ ಭಾರತವನ್ನು ನಿರ್ಮಿಸಲು ಸಂಕಲ್ಪ ತೊಟ್ಟವರನ್ನೇ ಆರಿಸಿ ಕಳಿಸಿದರೆ, ನಾವು ಇತ್ತ ಮತಕ್ಕೊಂದು ಬೆಲೆ ಬಂದೀತು. ನಮ್ಮ ಮತವೂ ಸಾರ್ಥಕವಾದೀತು.

ಅಂಥ ಸಾರ್ಥಕ್ಯದ ಭಾವ ನಮ್ಮಲ್ಲಿ ಮೂಡಬೇಕಾದರೆ ಹತ್ತುಬಾರಿ ಯೋಚಿಸಿ, ಚಿಂತಿಸಿ ಯೋಗ್ಯ ಪಕ್ಷಕ್ಕೆ ಮತ ನೀಡೋಣ. ಅದು ನಮ್ಮ ಧರ್ಮವೂ ಹೌದು ಮತ್ತು ಕರ್ತವ್ಯವೂ ಹೌದು.

●

6ನೇ ಪುಟದಿಂದ..... **ರಾಮತಾರಕ...**

ಕಲ್ಯಾಣವಾದೀತು. ಆದ್ದರಿಂದ ನಾವೆಲ್ಲರೂ ಸಂಕಲ್ಪ ಬದ್ಧರಾಗಿ ನಾಡಿನ ಕಲ್ಯಾಣಕ್ಕೋಸುಗ ರಾಮಮಂತ್ರವನ್ನು ಜಪಿಸೋಣ.

## ರಾಮ ನಾಮ ಜಪ ಹೇಗೆ ?

ಹಿಂದುಗಳು ಹೊಸ ವರ್ಷ ಯುಗಾದಿಯಂದು ಆರಂಭಿಸಿ 33 ದಿನಗಳ ಕಾಲ ಅಂದರೆ ಅಕ್ಷಯ ತೃತೀಯಾವರೆಗೆ ನಡೆಸುವುದು. 'ಶ್ರೀ ರಾಮ ಜಯ ರಾಮ ಜಯ ಜಯ ರಾಮ' ಎಂಬ 13 ಅಕ್ಷರಗಳ ಬೀಜ ಮಂತ್ರವನ್ನು ಪಠಿಸುವುದು. ಕುಟುಂಬದ ಎಲ್ಲರು ದೇವಳಕ್ಕೆ ಭೇಟಿ ನೀಡಿ ಮಂತ್ರ ಪಠನದ ಸಂಕಲ್ಪ ತೆಗೆದುಕೊಳ್ಳುವುದು. ಒಬ್ಬೊಬ್ಬರೇ ಇರುವವರು ಸ್ವಯಂ ಸಂಕಲ್ಪ ಸ್ವೀಕರಿಸಬಹುದು. ಜಪಕರ್ತರು ಕಂಕಣ ಕಟ್ಟಿ ದೀಕ್ಷೆ ಸ್ವೀಕರಿಸುವುದು. ಪ್ರತಿಯೊಬ್ಬ ಯಜ್ಞಕರ್ತ ತನಗೆ ತಿಳಿದಿರುವ 11 ಕುಟುಂಬಗಳನ್ನು ಈ ಕಾರ್ಯದಲ್ಲಿ ತೊಡಗಿಸಬೇಕು. ಜಪಯಜ್ಞನಿರತ ಕುಟುಂಬಗಳು ತಮ್ಮ ಮನೆಯ ಮೇಲೆ ಭಗವಾಧ್ವಜವನ್ನು ಹಾರಿಸಬೇಕು. ಪ್ರತಿದಿನದ ಜಪಸಂಖ್ಯೆ ದಾಖಲಿಸುವುದು. ಮೊಹಲ್ಲೆ ಅಥವಾ ಹಳ್ಳಿ– ಗ್ರಾಮಸ್ಥರು ಒಟ್ಟಾಗಿ ದೇವಾಲಯದಲ್ಲೂ ಈ ಮಂತ್ರ ಪಠನ ಮಾಡಬಹುದು. ಈ ಪುಣ್ಯ ಕಾರ್ಯದ ಯಶಸ್ಸಿನಲ್ಲಿ ತಾಯಂದಿರು, ಸಹೋದರಿಯರ ಪಾತ್ರ ಮಹತ್ವದ್ದಾಗಿದೆ. ದೇವಾಲಯ, ಶಾಲೆ, ಧಾರ್ಮಿಕ, ಸಾಮಾಜಿಕ, ಔದ್ಯಮಿಕ ಕೇಂದ್ರಗಳಲ್ಲಿ ಯುಗಾದಿಯಿಂದಲೇ ಈ ಜಪಯಜ್ಞ ಕಾರ್ಯವನ್ನು ಮಾಡುವಂತೆ ಪ್ರೇರೇಪಿಸಬಹುದು. ಜೊತೆಗೆ ಶ್ರೀರಾಮ ಸಂಕೀರ್ತನೆ, ನಗರ ಭಜನೆಗಳ ಮೂಲಕವೂ ಯಜ್ಞ ಕಾರ್ಯದಲ್ಲಿ ಭಾಗವಹಿಸಬಹುದೆಂದು ಸೂಚಿಸಲಾಗಿದೆ. ದಿನಕ್ಕೆ 13 ಜಪಮಾಲೆಗಳಂತೆ ಒಟ್ಟು 13 ಕೋಟಿ ರಾಮ ಮಂತ್ರ ಜಪ ಪಠನದ ಗುರಿ ಹೊಂದಲಾಗಿದೆ.

●

ಅಧ್ಯಕ್ಷರ ಫ್ಯಾಕ್ಸ್‌ನಿಂದ.........

ಕೆ. ಬಾಲಕೃಷ್ಣ ಭಟ್, Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ಕೇರಳ : ಕ್ರೈಸ್ತ ಮುಖ್ಯಮಂತ್ರಿ ; ಮುಸ್ಲಿಮ್ ವಿದ್ಯಾಮಂತ್ರಿ, ಅಲ್ಲಿ ಸಂಸ್ಕೃತಕ್ಕೆ ಸ್ವಾಗತ ! ಆದರೆ ಇಲ್ಲಿ.....?

ನಮ್ಮ ಪಕ್ಕದ ರಾಜ್ಯ ಕೇರಳ. ದೇಶದ ದಕ್ಷಿಣ ತುದಿಯ ರಾಜ್ಯವೂ ಹೌದು. ಹೇಳಿಕೇಳಿ ಪ್ರತಿ ವಿಚಾರದಲ್ಲೂ, ಪ್ರತಿಕ್ಷಣದಲ್ಲೂ ರಾಜಕಾರಣ ಮಾಡುವ, ಕಾಣುವ ರಾಜ್ಯ ಅದು. ರಾಜಕೀಯ ಪ್ರಬುದ್ಧತೆಯ ಪರಮೋಚ್ಚ ನಿದರ್ಶನವೆನ್ನಲಾಗುವ ಪ್ರಾಂತ ಕೇರಳವೆಂದು ಹೇಳಲಾಗುತ್ತಿದೆ. ಇದರ ಪರಿಣಾಮವೆಂದರೆ ಪ್ರತಿ ಐದು ವರ್ಷಕ್ಕೊಮ್ಮೆ ಅಲ್ಲಿ ಸರಕಾರದ ಆಡಳಿತ ವಿಪಕ್ಷದ ಕೈಯಲ್ಲಿ. ಇಂದಿನ ವಿಪಕ್ಷ, ಮುಂದೆ ಅಧಿಕಾರಕ್ಕೆ. ವಿಶೇಷವೆಂದರೆ ಅಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಪ್ರತಿ ಐದು ವರ್ಷಕ್ಕೊಮ್ಮೆ ಆಡಳಿತ ಮತ್ತು ವಿಪಕ್ಷ ಸ್ಥಾನವನ್ನು ವಿನಿಮಯ ಮಾಡಿಕೊಳ್ಳುತ್ತಿವೆ.

ದೇಶದಲ್ಲೇ ಮೊದಲ ಬಾರಿಗೆ 100% ಸಾಕ್ಷರತೆ ಹೊಂದಿದ ರಾಜ್ಯವೆನ್ನುವ ಖ್ಯಾತಿಯನ್ನೂ ಗಳಿಸಿಕೊಂಡ ರಾಜ್ಯವದು. ಅತ್ಯಂತ ಚಲನಶೀಲ, ಹೊಂದಾಣಿಕೆಗೊಳಗಾಗುವ ಜನವರ್ಗ ಇರುವ ರಾಜ್ಯವೆಂತಲೂ ಖ್ಯಾತಿ ಹೊಂದಿದೆ. ಒಂದೊಂದು ವಿಷಯದಲ್ಲೂ ತಮ್ಮದೇ ವಿಶಿಷ್ಟತೆ ಉಳಿಸಿಕೊಂಡ ರಾಜ್ಯವೆನ್ನಲೂ ಅಡ್ಡಿಯಿಲ್ಲ. ದೇವರ ಸ್ವಂತನಾಡೆಂದು ತಾವೇ ಹೇಳಿಕೊಳ್ಳುವ 'God's own country' ಎನ್ನುವ ರಾಜ್ಯ ಕೇರಳ. ಆ ಪೈಕಿ ಸದ್ಯ ಪ್ರಸ್ತಾಪಿಸುವ ವಿಷಯ ಅಚ್ಚರಿ ನೀಡಬಹುದು. ಅದೇಂದರೆ, ಆ ರಾಜ್ಯದಲ್ಲಿ ಇದುವರೆಗೂ ಆಗಿ ಹೋಗಿರುವ 16 ವಿದ್ಯಾಮಂತ್ರಿಗಳ ಪೈಕಿ, 'ಹಿಂದು' ಕೇವಲ ಒಬ್ಬನೇ ಒಬ್ಬ. ಅಂದರೆ ಮಿಕ್ಕ 15 ವಿದ್ಯಾಮಂತ್ರಿಗಳೂ ಇಸ್ಲಾಂ ಮತ್ತು ಕ್ರೈಸ್ತ ಪರಂಪರೆಗೆ ಸೇರಿದವರೇ ಆಗಿದ್ದಾರೆ. ಇಂದಿನ ವಿದ್ಯಾಮಂತ್ರಿಯ ಹೆಸರು ಪಿ. ಕೆ. ಅಬ್ದುರಬ್.

ಅಲ್ಲಿ ಇತ್ತೀಚೆಗೆ ಸಂಸ್ಕೃತ ಭಾರತಿ ಸಂಘಟನೆಯ ರಾಜ್ಯ ಸಮ್ಮೇಳನ 'ಸಂಸ್ಕೃತೋತ್ಸವ' ಕೇರಳದ ತಿರುವಂತಪುರದಲ್ಲಿ ನಡೆಯಿತು. **ರಾಜ್ಯದ ಮುಖ್ಯಮಂತ್ರಿ ಉಮ್ಮನ್ ಚಾಂಡಿ** ಮುಖ್ಯ ಅತಿಥಿಯಾಗಿ ಬಂದಿದ್ದರು. ಅತ್ಯಂತ ವ್ಯವಸ್ಥಿತವಾಗಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಕೃತದ ಹಿರಿಮೆ, ಗರಿಮೆಗಳ ಮಾಹಿತಿ ಪಡೆದ ಮುಖ್ಯಮಂತ್ರಿ ಅಲ್ಲಿ ಘೋಷಿಸಿಯೇ ಬಿಟ್ಟರು **"ಮುಂದಿನ ಜೂನ್ 1ರಿಂದ ರಾಜ್ಯದ ಒಂದನೇ ತರಗತಿಯ ಪ್ರತಿಯೊಂದು ಮಗುವಿಗೂ ಸಂಸ್ಕೃತ ಕಲಿಕೆಯ ಅವಕಾಶ ನೀಡಲಾಗುವುದು"**. ಅವರನ್ನು ಆಮಂತ್ರಿಸಿದ ಸಂಸ್ಕೃತ ಭಾರತಿಯ ಹಿರಿಯ ಕಾರ್ಯಕರ್ತರಿಗೇ ಅಚ್ಚರಿ. "ರೋಗಿ ಬಯಸಿದ್ದು ಹಾಲು, ವೈದ್ಯ ಕೊಟ್ಟದ್ದೂ ಕ್ಷೀರ, ಅಂದಂತಾಯಿತು ಅಲ್ಲವೇ?

ಇದು ಸಂಸ್ಕೃತ ಭಾಷೆಯ ಸನಾತನತೆ ಜನಪ್ರಿಯತೆಯ ದ್ಯೋತಕವೆನ್ನಲೇ ಬೇಕು. ಜಾತಿ, ಮತ, ಪಂಥದ ಸೀಮೆ ಇಲ್ಲದ ದೇವ ಭಾಷೆ ಸಂಸ್ಕೃತ. ಇದನ್ನು ಮೃತ ಭಾಷೆ ಎನ್ನುವವರ ಮನಸ್ಸೇ ಮೃತವೆನ್ನಬೇಕು.

ಮತದಿಂದ ಕ್ರೈಸ್ತ, ಪಕ್ಷ ಕಾಂಗ್ರೆಸ್, ಹಿರಿಯ ರಾಜಕೀಯ ಮುತ್ಸದ್ದಿ ಉಮ್ಮನ್‌ಚಾಂಡಿ ಆಡಿದ ಮಾತಿನಂತೆ ಕೇರಳದ ಮಕ್ಕಳಿಗೆ ಸಂಸ್ಕೃತ ಭಾಷೆಯ ಅಮೃತ ಪಾನ ಮಾಡಿಸ ಹೊರಟಿದ್ದಾರೆ ಎಂದು ಅನಿಸುವುದಿಲ್ಲವೇ ? ಆದಿಶಂಕರಾಚಾರ್ಯರಂತಹ ಅದ್ವೈತ ಮತ ಪ್ರವರ್ತಕರು ಜನಿಸಿ, ಸಂಸ್ಕೃತದ ಹಿರಿಯ ವಿದ್ವಾಂಸರೆನಿಸಿ ಹಿಂದೂ ಧರ್ಮದ ಪುನರುತ್ಥಾನ ಮಾಡಿದ ಭೂಮಿಯಲ್ಲಿ ಮತ್ತೆ ಸಂಸ್ಕೃತದ ಪುನರುತ್ಥಾನವಾಗುವ ಭರವಸೆ ಇದೆನ್ನಬಹುದೇ?

ಆದರೆ, ಕರ್ನಾಟಕದಲ್ಲಿ ? :– ರಾಜ ಮಹಾರಾಜರ ಕಾಲದಿಂದಲೂ ಸಂಸ್ಕೃತ ಶಿಕ್ಷಣಕ್ಕೆ ಹೆಸರುವಾಸಿಯಾದ ಮೈಸೂರು – ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಕಡೆಯಿಂದ ಸಂಸ್ಕೃತದ ಪ್ರಚಾರಕ್ಕೆ ಏನು ಕೊಡುಗೆಯಿದೆ ಎಂಬುದನ್ನು ತುಲನೆ ಮಾಡಬೇಕೆನಿಸುವುದು ಸಹಜ. ಕರ್ನಾಟಕದ ಇಂದಿನ ಸರಕಾರ ಬಂದ ಹೊಸದರಲ್ಲೇ ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗವೊಂದು ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರನ್ನು ಭೇಟಿ ಮಾಡಿ ಬಹಳ ಬೇಡಿಕೆಗಳನ್ನಿಡ

(ಪುಟ 9ಕ್ಕೆ....)

8ನೇ ಪುಟದಿಂದ..... **ಆದರೆ ಇಲ್ಲಿ ?**

ದಿದ್ದರೂ ತಮ್ಮ ಹೆಸರನ್ನು ಮುಂದಿನ ದಿನಗಳಲ್ಲೂ ನೆನಪಿಡುವಂತಹ ಕಾರ್ಯ ಸಂಸ್ಕೃತ, ಸಂಸ್ಕೃತಿ ರಕ್ಷಣೆಯ ಶಾಶ್ವತ ಕೆಲಸ ನಿಮ್ಮಿಂದಾಗಬೇಕು ಎಂದು ಮನವಿ ನೀಡಿತ್ತು. ಎಲ್ಲರೂ ಮಾಡುವಂತೆ ವೈಯಕ್ತಿಕ ಸ್ವಾರ್ಥಕ್ಕಾಗಿ, ಮಂತ್ರಿಗಳ ಹಿಂದೆ ಮುಂದೆ ಹಲ್ಲು ಗಿಂಜುತ್ತಾ, ಹಾರತುರಾಯಿಯಿಂದ ನಿಮ್ಮನ್ನು ಸಂತುಷ್ಟಿಗೊಳಿಸುತ್ತ ತಮ್ಮ ಬೇಳೆ ಬೇಯಿಸುವುದಕ್ಕಾಗಿ ಬೇಕಾದ ಎಲ್ಲವನ್ನೂ ಮಾಡುವ ತುಚ್ಛಕೆಲಸ ನಮ್ಮ ಶಿಕ್ಷಕ ಸಂಘ ಮಾಡಿಲ್ಲ, ಮಾಡುವುದಿಲ್ಲ. ನಾವು ಹಾಕುವುದು ಪ್ರೀತಿಯ ಮಾತಿನ ಹಾರ, ಎಂದೂ ಬಾಡದ ಹಾರ. ಐವತ್ತೋ ನೂರೋ ರೂಪಾಯಿಗಳ ಹಾರವಲ್ಲ. ಬದಲಿಗೆ ಅನುದಿನವೂ ನೆನಪಿಡಬಹುದಾದ ಅಮೂಲ್ಯ ಹಾರ ಎಂದು ಸಚಿವರಿಗೆ ಮನವಿಯ ಜತೆಗೆ ಪರೋಕ್ಷ ಎಚ್ಚರದ ಮಾತನ್ನೂ ಹೇಳಿತ್ತು. ತಮ್ಮ ಅಧಿಕಾರಾವಧಿಯ ಮಧ್ಯಭಾಗದಲ್ಲಿ ಮತ್ತೊಮ್ಮೆ ಶಿಕ್ಷಕ ಸಮಾಚಾರದಲ್ಲಿ ಲೇಖನದ ಮೂಲಕವೂ ಎಚ್ಚರಿಸಲಾಗಿತ್ತು. ನಿರ್ದಿಷ್ಟವಾಗಿ ಸಂಸ್ಕೃತ ಶಿಕ್ಷಕ ಸಂಘದ ಪ್ರಪತ್ರದ ಜತೆಗೆ ನಮ್ಮ ಸಂಘದ ಕಡೆಯಿಂದ ಲಿಖಿತ ಆಗ್ರಹವನ್ನೂ ಮಾಡಲಾಗಿತ್ತು.

ಕಳೆದ 15 ವರ್ಷಗಳಿಂದ ಕರ್ನಾಟಕದ ಪ್ರೌಢಶಾಲೆಗಳಲ್ಲಿ ಸಂಸ್ಕೃತ ನಿಧಾನವಾಗಿ ಮರೆಯಾಗುವ ಹಂತ ತಲಪಿದೆ. ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ಸಂಸ್ಕೃತ ಭಾಷೆಯ ಕಲಿಕೆಗೆ ಅವಕಾಶವಿದ್ದ ಶಾಲೆಗಳಲ್ಲಿ ಶಿಕ್ಷಕರು ನಿವೃತ್ತರಾದ ಮೇಲೆ ಮತ್ತೆ ನೇಮಕವಾಗುತ್ತಿಲ್ಲ. ಇಡೀ ವಿಭಾಗದಲ್ಲಿ ಬೆರಳೆಣಿಕೆಯ ಸಂಖ್ಯೆಯ ಖಾಲಿ ಹುದ್ದೆಗಳನ್ನು ತೋರಿಸಲಾಗುತ್ತಿದೆ. ಸಂಸ್ಕೃತ ಸ್ಥಿತಿಗತಿಯ ಬಗ್ಗೆ ಪ್ರತ್ಯೇಕ ಸಭೆ ನಡೆಸುವಂತೆ ನಮ್ಮ ಸಂಘದ ಅಧ್ಯಕ್ಷರು ವಿನಂತಿಸಿದುದು ನಿಮಗೆ ಈಗ ಮರೆತಿರಬಹುದು. ನಿಮ್ಮ ಬಳಿ ಅದಕ್ಕೆ ಸಮಯವಿಲ್ಲ.

ಇದೀಗ ತಮ್ಮ ಕುರ್ಚಿ ತೆರವುಗೊಳಿಸುವ ಕಾಲ ಬಂದಿದೆ. ಬಹುಶಃ ಈಗ ನೀವು ಏನೂ ಮಾಡಲಾರಿರಿ. ಹರಿದು ಹೋದ ನೀರಿಗೆ ಕಟ್ಟೆ ಕಟ್ಟಲು ಬರುವುದಿಲ್ಲ. ತಮ್ಮ ಅವಧಿಯಲ್ಲಿ ಕರ್ನಾಟಕದಲ್ಲಿ ಏನೂ ಸಾಧನೆ ಆಗಿಲ್ಲವೆಂದು ನಾವು ಹೇಳುತ್ತಿಲ್ಲ. ಆದ್ಯತೆಯ ನೆಲೆಯಲ್ಲಿ ನಿಮ್ಮಂತಹವರು ಮಾಡಬೇಕಾದ್ದನ್ನು ಅಲ್ಲಿ ಕೇರಳದಲ್ಲಿ ಉಮ್ಮನ್‌ಚಾಂಡಿ ಮಾಡಿದ್ದಾರೆ. ಅಷ್ಟೇ!

ಅದು ಮಾಡಲೇಬೇಕಾದ್ದೆಂದು ನಮ್ಮ ಆಗ್ರಹದ ನಂತರವೂ ನಿಮಗೆ ಅನಿಸಲಿಲ್ಲ ಎಂದು ನಮ್ಮ ಕಾರ್ಯಕರ್ತರು, ಪೋಷಕರು ಗುರುತಿಸಿದ್ದಾರೆ. ಸರಕಾರ ಸಂಸ್ಕೃತ ವಿಶ್ವವಿದ್ಯಾಲಯ ಮಾಡಿಲ್ಲವೇ? ಎಂದು ನೀವು ಕೇಳಬಹುದು. ಆದರೆ ಸಂಸ್ಕೃತದ ಮೂಲ ಶಿಕ್ಷಣ, ಪ್ರೌಢಶಾಲೆಗಳಲ್ಲಿ, ಪಿ.ಯು. ಹಂತದಲ್ಲಿ ಸಿಗದಿದ್ದರೆ ವಿಶ್ವವಿದ್ಯಾಲಯದಲ್ಲಿ ಅದನ್ನು ಪಡೆಯಲು ವಿದ್ಯಾರ್ಥಿಗಳು ಸಿಗಲಾರರು. ಆಧಾರ ಶಿಲೆಯಿಲ್ಲದ ಕಟ್ಟಡವೆಂದು ಅದನ್ನು ಹೇಳಿಯಾರು. ಇರಲಿ. ಏನಿದ್ದರೂ ಮುಂದಿನ ಚುನಾವಣೆಗೆ ನೀವು ತಯಾರಿ ಮಾಡಬೇಕಲ್ಲವೆ? ಕರ್ನಾಟಕದಲ್ಲಿ ಸಂಸ್ಕೃತ ಶಿಕ್ಷಣಕ್ಕೆ ನಿಮ್ಮಿಂದ ಯಾವ ಕೊಡುಗೆಯಾಗಿದೆ ಎಂಬುದು ದಾಖಲೆಯಿಂದ ಸಿಗಬಹುದು.

ಅದಕ್ಕೆ ಕಾರಣಗಳನ್ನು ಹುಡುಕಬೇಕಾದ್ದಿಲ್ಲ. ನಿಮ್ಮ ಅಧಿಕಾರಿಗಳಿಗೆ ಸಂಸ್ಕೃತ ಇದ್ದರೇನು? ಬಿದ್ದರೇನು? ಹಣ ಒಂದಿದ್ದರೆ ಸಾಕೆಂದು ಅನಿಸಬಹುದು. ನೀವು ಭ್ರಷ್ಟರಾಗಿದ್ದೀರೋ ಇಲ್ಲವೋ ಗೊತ್ತಿಲ್ಲ. ನಿಮಗೆ ಅತಿ ಸಮೀಪದ ವ್ಯಕ್ತಿ–ಅಧಿಕಾರಿಯ ಬಗ್ಗೆ ಜನತೆ ನಮ್ಮಲ್ಲಿ ಹೇಳುತ್ತಿದ್ದಾರೆ. ಕರ್ನಾಟಕದಲ್ಲಿ ಸಂಸ್ಕೃತ ಕಾಣೆಯಾದರೆ ಜರ್ಮನಿಯಲ್ಲಿ ಅದು ಹೇಗೆ ಉಳಿದಿದೆ ಎಂದು ತಿಳಿಯಲು ನಿಮ್ಮ ಅಧಿಕಾರಿಗಳನ್ನು ಕಳುಹಿಸಬಹುದು. ಹಿಂದೆ ರಾಜ ಮಹಾರಾಜರ ಪೋಷಣೆಯಲ್ಲಿ ಸಂಸ್ಕೃತ ಉಳಿಯಿತು. ಬೆಳೆಯಿತು. ಇಂದು ಆ ಕೆಲಸ ಆಧುನಿಕ ರಾಜ–ಮಹಾರಾಜರು–ಸಚಿವರು ಇವರಿಂದ ಆಗಬೇಕಿತ್ತು. ಇರಲಿ, ಬಿಡಿ. ಸಂಸ್ಕೃತ ಭಾರತಿಯಂತಹ ಸಂಘಪ್ರೇರಿತ ಸಂಘಟನೆ ಇದನ್ನು ಮಾಡುತ್ತಿದೆ. ನೆನಪಿಡೋಣ– ಸರಕಾರ, ಮಂತ್ರಿಗಳು ಬರಬಹುದು, ಹೋಗಬಹುದು. ಹಾಲಿಗಳು ಮಾಜಿಗಳಾಗಬಹುದು. ಆದರೂ ನಮಗೆ ಕಾಣುವುದು–ಎಲ್ಲಿಯ ಮಿರ್ಜಾ ಇಸ್ಮಾಯಿಲ್, ಎಲ್ಲಿಯ ಉಮ್ಮ್‌ನ್ ಚಾಂಡಿ ಮತ್ತು ಎಲ್ಲಿಯ ಕಾಗೇರಿ? ಅಂತ. ಆದರೆ ಈ ದೇಶ, ಧರ್ಮ ಉಳಿಯುತ್ತದೆ. ಸಂಸ್ಕೃತವಂತೂ ವಿಶ್ವದೆಲ್ಲೆಡೆ ಉಳಿದೇ ಉಳಿಯುತ್ತದೆ.

ಕರ್ನಾಟಕದಲ್ಲಿ, ಬೆಂಗಳೂರಲ್ಲಿ ಚಾಮರಾಜಪೇಟೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಕೇಂದ್ರ ಕಟ್ಟಡದ ಎದುರು ಇಂದಿನ ಸಂಸ್ಕೃತ ವಿಶ್ವವಿದ್ಯಾಲಯ ಇರುವುದು ಚಾಮರಾಜೇಂದ್ರ – ಸಂಸ್ಕೃತ ಕಾಲೇಜಿನಲ್ಲಿ ಎಂದು ನಮಗೆ ಗೊತ್ತಿರಬೇಕು. ಅದು ಅಂದಿನ ಮೈಸೂರು ಮಹಾರಾಜರ ಅನುಜ್ಞೆಯಂತೆ ಸರಕಾರದ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್‌ರವರ ನಿರ್ದೇಶನದಿಂದ ನಿರ್ಮಾಣವಾದುದು. ಆ ಕಟ್ಟಡದ ಗೋಡೆಯ ಒಂದೊಂದು ಕಲ್ಲು ಮೇಲೇರುವುದನ್ನೂ ಸ್ವತಃ ಗಮನಿಸಿದವರು ಮಿರ್ಜಾ ಇಸ್ಮಾಯಿಲ್ ಎನ್ನಲಾಗುತ್ತಿದೆ. ಅವರು ಪರಮ ಸಂಸ್ಕೃತ ಪ್ರೇಮಿಯಾಗಿದ್ದರು ಎಂದು

(ಪುಟ 10ಕ್ಕೆ....)

9ನೇ ಪುಟದಿಂದ..... **ಆದರೆ ಇಲ್ಲಿ ?...**

ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಸಂಸ್ಕೃತ ಭಾಷೆಗೆ ಇದ್ದ ಆಶ್ರಯ, ಪ್ರೋತ್ಸಾಹ ಅದೇಕೆ ಈಗ ಈ ಸ್ಥಿತಿಗೆ ಇಳಿದಿದೆ ಎಂದು ಚಿಂತಿಸಬೇಕಾದ ಅಧಿಕಾರದ ಮಂದಿಗೆ ಬಹುಶಃ ಇದರ ಪರಿವೆ ಇದ್ದಂತಿಲ್ಲ. ಜನರಲ್ಲಿ ಹಾಲಿ ಇರುವ ಸಂಸ್ಕೃತದ ಮೇಲಿನ ಅಭಿಮಾನ ನಮ್ಮ ಸರಕಾರಗಳ ಕೃಪೆಯಿಂದ ಬಂದುದಲ್ಲ. ಸಂಸ್ಕೃತ ಭಾರತಿ, ಸಂಸ್ಕೃತ ಪರಿಷತ್ ಮುಂತಾದ ಸ್ವಯಂ ಸೇವಾ ಸಂಘಟನೆಗಳು, ಅದರ ಕಾರ್ಯಕರ್ತರು ಉಚಿತವಾಗಿ ನಡೆಸುವ ಸಂಸ್ಕೃತ ಸಂಭಾಷಣಾಶಿಬಿರಗಳ ಪ್ರೇರಣೆಯಿಂದಲೇ ಇಷ್ಟಾದರೂ ಉಳಿದಿದೆ ಎನ್ನುವುದರಲ್ಲಿ ಉತ್ಪ್ರೇಕ್ಷೆ ಇರಲಾರದು. ವಿಶ್ವದ ಮೊದಲ ಗ್ರಾಮಾಫೋನ್ ರೆಕಾರ್ಡಿಂಗ್ ಮತ್ತು ಅದರ ಪುನರ್‌ಪ್ರಸರಣ ನಡೆಯಲು ಒದಗಿದ ಭಾಷೆ ಸಂಸ್ಕೃತವಂತೆ, ಮತ್ತು ಅಲ್ಲಿನ ಸಾಹಿತ್ಯ ಋಗ್ವೇದದ "ಅಗ್ನಿಮೀಳೇಪುರೋಹಿತಂ" ಎನ್ನುವ ಋಕ್(ವಾಕ್ಯ) ಎಂದು ಎಲ್ಲೋ ಓದಿದ ನೆನಪಿದೆ.

ಹೀಗಿದ್ದಾಗ ದಕ್ಷಿಣ ಭಾರತದ ಹೆಬ್ಬಾಗಿಲು ಎಂದು ನಾವೇ ಹೇಳಿಕೊಳ್ಳುವ ಕರ್ನಾಟಕದಲ್ಲಿ ಮೊದಲ ಬಾರಿಗೆ ದೊರೆತ 80 ತಿಂಗಳ ಅಧಿಕಾರದ ಅವಕಾಶದಲ್ಲಿ ಸಂಸ್ಕೃತದ ಕಲ್ಪವೃಕ್ಷಕ್ಕೆ ಒಂದು ಕೊಡ ಕೊಳಚೆ ನೀರಾದರೂ ಎರೆದಿದ್ದರೆ ಅದರಿಂದ ಸಿಗುವ ಅಮೃತ ಸಮಾನ ಸವಿಯ ಎಳನೀರನ್ನು ಒಂದು ಚಮಚೆಯಷ್ಟನ್ನಾದರೂ ಮುಂದಿನ ನಮ್ಮ ಮಕ್ಕಳಿಗೆ ನೀಡಬಹುದಿತ್ತು.

ವಿಶ್ವದಲ್ಲೇ ಐ.ಟಿ.ಬಿ.ಟಿ. ಖ್ಯಾತಿಯ ಬೇಂಗಳೂರು ಮತ್ತು ಹೈದ್ರಾಬಾದ್‌ಗಳಲ್ಲಿ ಶಿಕ್ಷಿತ ಯುವಕ–ಯುವತಿಯರ ಪೈಕಿ ಸಂಸ್ಕೃತ ಕಲಿತ ಮಕ್ಕಳೇ ಅಮೇರಿಕಾ ಮುಂತಾದ ವಿದೇಶಗಳಲ್ಲಿ ಮಿಂಚಿದ್ದಾರೆ ಎಂಬ ಅಂಕಿ–ಅಂಶವೂ ನಮ್ಮ ಮನದಲ್ಲಿರಬೇಕು.

ಇರಲಿ. ನಾವು ಸಂಸ್ಕೃತ ಕಲಿತಿರಲಿ, ಬಿಡಲಿ. ನಮ್ಮ ಮಕ್ಕಳನ್ನಂತೂ ಸಂಸ್ಕೃತ ಕಲಿಸುವ ಶಾಲೆ, ಕಾಲೇಜುಗಳಿಗೆ ಕಳಿಸೋಣ. ಸಂಸ್ಕೃತ ಸಂಭಾಷಣ ಶಿಬಿರಗಳಿಗೆ ನಾವು ಮತ್ತು ನಮ್ಮವರು ಹೋಗೋಣ. ಶಿಬಿರಗಳನ್ನು ಯೋಜಿಸೋಣ. ನಮ್ಮ ರಾಜ್ಯದ ಆಂಗ್ಲ ಮಾಧ್ಯಮ ಶಾಲೆಗಳಿಂದ ಹೊರಬರುವ ಟೈ ಕಟ್ಟಿದ, ಇಂಗ್ಲೀಷ್‌ನಲ್ಲೇ ಮನೆಯಲ್ಲೂ ಮಾತನಾಡಬೇಕೆಂದು 'ಮಿಸ್' ಗಳಿಂದ ಹೇಳಿಸಿಕೊಳ್ಳುವ ನಮ್ಮ 'ಕನ್ನಡ' ಮಕ್ಕಳಿಗೆ ನೆಟ್ಟಗೆ ಒಂದು ಪುಟ ಓದಿ, ಒಂದು ವಾಕ್ಯವನ್ನೂ ತಪ್ಪಿಲ್ಲದ ಕನ್ನಡದಲ್ಲಿ ಬರೆಯಲು ಬರುವುದಿಲ್ಲವೆಂಬ ಕಟು ಸತ್ಯಕ್ಕೆ ಕಾರಣ ಸಂಸ್ಕೃತ ತಾಯಿಯನ್ನು ಬೈದುದು ಮತ್ತು ಇಂಗ್ಲೀಷ್‌ನ 'ಆಂಟಿ' ಯನ್ನು ಲೆಕ್ಕಕ್ಕಿಂತಲೂ ಹೆಚ್ಚು ಪ್ರೇಮಿಸಿರುವುದು.

"ಕನ್ನಡದ ನಂಬರ್ ಒಂದು ಶತ್ರು ಸಂಸ್ಕೃತ ಮತ್ತು ನಂಬರ್ ಒಂದು ಮಿತ್ರ ಇಂಗ್ಲೀಷ್" ಎಂದು ಭ್ರಮಿಸುವ ವಿಚಾರ ವ್ಯಾಧಿಗಳಿಗೆ ಮತ್ತು ಪೋಷಕರಿಗೆ ತಮ್ಮ ಅಂತಿಮ ದಿನಗಳಲ್ಲಿ ವೃದ್ಧಾಶ್ರಮಕ್ಕೆ ಸೇರಿಸಲೂ ಕೂಡ ತಮ್ಮ ಮಕ್ಕಳಿಗೆ ಸಮಯವಿರದು ಎಂಬ ಸತ್ಯ ಈಗಾಗಲೇ ಸಿದ್ಧವಾಗಿದೆ. ನಮ್ಮ ಮಕ್ಕಳು ಅಮೇರಿಕಾದಿಂದ ಕಳಿಸುವ ಸಾವಿರಾರು ಡಾಲರ್‌ಗಳನ್ನು ತಿನ್ನಲು ಬರುವುದಿಲ್ಲ. ಅವುಗಳನ್ನು ಭಾರತೀಯ ರೂಪಾಯಿಗಳಾಗಿ ಬದಲಿಸಿ ತರುವೆನೆಂದು ಹೋದವನು ಮತ್ತೆ ನಿಮ್ಮ ಬಳಿಬರನೆಂಬುದೂ ಅಷ್ಟೇ ಸತ್ಯ.

ಈಗ ಹೇಳಿ– ಅಪರೂಪದಲ್ಲಿ ಬಂದ ಒಂದು ಸುವರ್ಣ ಅವಕಾಶವನ್ನು ದೇಶದ, ರಾಜ್ಯದ ಸಂಸ್ಕೃತಿ–ಸಂಸ್ಕೃತ ಉಳಿಸಲು – ಬೆಳೆಸಲು ಬಳಸದ ಮಂದಿಗೆ ಮತ್ತೆ ಅಂತಹ ಅವಕಾಶ ಒದಗುವುದೇ? ಸಂಸ್ಕೃತದಲ್ಲಿ ಒಂದು ಮಾತು ಹೀಗಿದೆ:

"ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿ:"– ಅಂದರೆ ವ್ಯಕ್ತಿಯ, (ಸರಕಾರದ, ದೇಶದ) ಭಾಗ್ಯ ಪಂಕ್ತಿ ಯಾವಾಗಲೂ ಒಂದೇ ರೀತಿ ಸ್ಥಿರ ಇರುವುದಿಲ್ಲ. ತಿರುಗುವ ಚಕ್ರದ ಮೇಲೆ ಒಂದು ಕಪ್ಪು ಚುಕ್ಕಿ ಇಟ್ಟರೆ ಆ ಚುಕ್ಕಿ ಮತ್ತೆ ಕೆಳಗೆ ಬಂದೇ ಬರುತ್ತದೆ" ಎಂದು

**"ಜಯತು ಸಂಸ್ಕೃತಮ್"** ●

## ಚುಟುಕ

**ಕೆ. ಬಾಲಕೃಷ್ಣ ಭಟ್**

### 3ಕ್ಕೆ 1, 1ಕ್ಕೆ ಮೂರು

ಅಲ್ಲಿ – ಮೂರು ಅವಧಿಗೂ ಮೋದಿ ಸಿ.ಎಂ. ನೋಡಿ ಗುಜರಾತು  
ಇಲ್ಲಿ – ಒಂದು ಟರ್ಮಿಗೆ ಮೂರು ಸಿ.ಎಂ. ಏಕೆ ಹೀಗಾಯ್ತು ?  
ತತ್ವವಿಲ್ಲದ ರಾಜಕೀಯಕೆ ನಾಡು ಬಲಿಯಾಯ್ತು  
ಸ್ವಾರ್ಥ ಸಾಧನೆಯಿಂದ ಕೆಲವರ ಪಕ್ಷ ಬಡವಾಯ್ತು

### ಭ್ರಷ್ಟತೆಗೆ ಪೈಪೋಟಿ

ಕೆ.ಜೆ.ಪಿ, ಬಿಜೆ.ಪಿ, ಕಾಂಗ್ರೆಸ್ಸು, ಜೆ.ಡಿ  
ಶ್ರೀರಾಮುಲುನ ಪಕ್ಷ ಮಾಡಿದವು ಲೂಟಿ ।  
ಭ್ರಷ್ಟತೆಗೆ ಪೈಪೋಟಿ ನೀಡಿದ್ದೆ ಪ್ರಾಬ್ಲೆಮ್ಮು  
ನಿಗಮ ಮಂಡಳಿಗಳಿಗೆ ಮಾಡಿ ಚೇರ್ಮನ್ನು ॥

# ಮಹಿಳೆಯರ ಮೇಲಿನ ದೌರ್ಜನ್ಯಗಳು ಸಂಪೂರ್ಣ ನಿಲ್ಲಲಿ




'ನನ್ನ ಮಗಳಿಗೆ ಸಿಗುತ್ತಿರುವ ಎಲ್ಲಾ ಪ್ರಶಸ್ತಿಗಳು ಹಾಗೂ ದೇಶದ ಜನರ ಹೃದಯಗಳಲ್ಲಿ ಆಕೆಗೆ ಸಿಗುತ್ತಿರುವ ಸ್ಥಾನ, ನನ್ನ ಮನತುಂಬಿಸಿದೆ. ಇನ್ನಾದರೂ ಮಹಿಳೆಯರ ಮೇಲೆ ದೌರ್ಜನ್ಯಗಳು ದೇಶದಲ್ಲಿ ನಶಿಸುತ್ತವೆ ಎಂಬ ಆಶಾವಾದ ಮೂಡಿಸಿವೆ'. ಇದು ಕಳೆದ ವರ್ಷ ಡಿಸೆಂಬರ್ 16ರಂದು ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿ ಅಸುನೀಗಿದ ಆ ಬಾಲೆಯ ತಂದೆ ಮಹಿಳಾದಿನದಂದು ದೆಹಲಿಯ ವಿಜ್ಞಾನ ಭವನದಲ್ಲಿ ಸರಕಾರದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಕಣ್ಣೀರಿಡುತ್ತಾ ನೀಡಿದ ಅನಿಸಿಕೆ.

ಅಂದು ರಾಷ್ಟ್ರಪತಿಗಳು ಆ ಯುವತಿಗೆ ರಾಣಿ ಲಕ್ಷ್ಮೀಬಾಯಿ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿದರು.

# ಮಹಿಳಾ ಬ್ಯಾಂಕ್ ಹಾಗೂ ಮಹಿಳಾ ಅಂಚೆ ಕಛೇರಿ

ಈ ಬಾರಿಯ ಬಜೆಟ್ ಮಂಡಿಸಿರುವ ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಅವರು ಮಹಿಳೆಯರಿಗಾಗಿ ಬ್ಯಾಂಕ್‌ನ್ನು ಸ್ಥಾಪಿಸಲು ಹೊರಟಿರುವ ಸ್ವಾಗತಾರ್ಹ ವಿಚಾರ ತಿಳಿದ ಸಂಗತಿಯೇ. ಆದರೆ ಈ ಕಲ್ಪನೆ ಹೊಸದೇನೂ ಅಲ್ಲ. ಈಗಾಗಲೇ ದಶಕಗಳ ಮೊದಲೇ ಈ ಕಲ್ಪನೆ ಜಾರಿಯಲ್ಲಿದೆ.

# ದೇಶದಲ್ಲೆ ಮೊದಲ ಮಹಿಳಾ ಬ್ಯಾಂಕ್

ಸಿಂಡಿಕೇಟ್ ಬ್ಯಾಂಕ್ 1962ರಲ್ಲಿ ದೇಶದಲ್ಲೇ ಮೊದಲಬಾರಿಗೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಮಹಿಳಾ ಮ್ಯಾನೇಜರ್ ಸಿಬ್ಬಂದಿ ಹೊಂದಿದ ಬ್ಯಾಂಕ್‌ನ ಶಾಖೆಯೊಂದನ್ನು ರಚಿಸಿತ್ತು. 17ನೇ ವರ್ಷಗಳ ಹಿಂದೆಯೇ ಸ್ಥಾಪಿನೆಗೊಂಡ ಬೆಳಗಾವಿಯ ಮಹಿಳಾ ಬ್ಯಾಂಕ್ ಹಾಲಿ ರಾಜ್ಯಸಭಾ ಸದಸ್ಯ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷ ಕೋರೆಯವರು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿ ತಮ್ಮ ಕನಸನ್ನು ನನಸಾಗಿಸಿದ್ದಾರೆ. 1996ರಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ಬ್ಯಾಂಕ್ ಅನ್ನು ತಮ್ಮ ಪತ್ನಿ ಆಶಾಕೋರೆಯವರ ನೇತೃತ್ವದಲ್ಲಿ ಪ್ರಾರಂಭಿಸಿದರು. 'ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್' ಅಸ್ತಿತ್ವಕ್ಕೆ ಬಂದಿತು. ಈ ಬ್ಯಾಂಕಿನ ವತಿಯಿಂದ ಸುಮಾರು 70 ಕೋಟಿ ರೂ. ಠೇವಣಿ ಹೊಂದಲಾಗಿದ್ದು 44 ಕೋಟಿ ಸಾಲವನ್ನು ನೀಡಲಾಗಿದೆ. ಇದು ಮೂರು ಸಾವಿರ ಸದಸ್ಯರನ್ನು ಹೊಂದಿದ್ದು, ಕಳೆದ ವರ್ಷದಲ್ಲಿ 1.20 ಕೋಟಿ ರೂ. ಲಾಭಗಳಿಸಿದೆ.

# ದೆಹಲಿಯಲ್ಲಿ ಮೊದಲ ಮಹಿಳಾ ಪೋಸ್ಟ್ ಆಫೀಸ್

ಪೂರ್ಣ ಪ್ರಮಾಣದಲ್ಲಿ ಮಹಿಳಾ ಸಿಂಬ್ಬಂದಿಯನ್ನು ಹೊಂದಿರುವಂತಹ ಅಂಚೆ ಕಛೇರಿಯನ್ನು ಮೊಟ್ಟಮೊದಲ ಬಾರಿಗೆ ದೆಹಲಿಯಲ್ಲಿ ಪ್ರಾರಂಭಿಸಲಾಗಿದೆ. ಮಹಿಳಾ ದಿನಾಚರಣೆಯಂದು ಸ್ಥಾಪನೆಯಾಗಿರುವ ಈ ಅಂಚೆ ಕಛೇರಿಯಂತೆ, ದೇಶದ ಮಹಾನಗರಗಳು ಹಾಗೂ ಪ್ರಮುಖ ನಗರಗಳಾದ ಮುಂಬೈ, ಚೆನ್ನೈ, ಬೆಂಗಳೂರು, ಚಂಡೀಗಢ, ಲಕ್ನೋ, ಹೈದರಾಬಾದ್, ಸದ್ಯದಲ್ಲೇ ಆರಂಭಿಸ ಲಾಗುವುದೆಂದು ಕೇಂದ್ರದ ಅಂಚೆ ಇಲಾಖೆಯು ತಿಳಿಸಿದೆ.

**ತಪ್ಪೊಪ್ಪಿಗೆ : ಕಳೆದ ಸಂಚಿಕೆಯ ಮಹಿಳಾ ವಿಭಾಗದಲ್ಲಿ ಪ್ರಕಟವಾದ ಆನಂದಿಬಾಯಿ ಜೋಷಿ ಲೇಖನದ ಲೇಖಕಿ ಶ್ರೀಮತಿ ಬಿ.ಕೆ ವರಲಕ್ಷ್ಮಿ**

## ರಾಜಕೀಯ – ಬಚ್ಚಲು

ರಾಜಕೀಯವು ಕೊಚ್ಚೆಯೆಂದೆಣಿಸಬೇಡ
ಮನೆಯೊಳಗೆ ಬಚ್ಚಲಿದೆ ಕೊಳೆಮಾಡಬೇಡ ।
ಬಚ್ಚಲಿನ ಸ್ವಚ್ಛತೆಗೆ ಮನೆಯವರೆ ಹೊಣೆಯು
ಮನೆಯವರು ಒಲ್ಲೆಯೆನೆ ಮನೆಯೆಲ್ಲ ಹೊಲಸು ॥

## ಅಪರೇಶನ್ – ಗದ್ದುಗೆ

"ಇದ್ದ ನೀರನು ಬಂದ ನೀರೇ ಕೊಚ್ಚಿ ಕೊಂಡೋಯ್ತು"
ಎಂಬ ಗಾದೆಯು ರಾಜಕೀಯಕೆ ಬಹಳ ಸರಿಹೋಯು ।
ಅಪರೇಶನ್ ಮಾಡಿ ಗದ್ದುಗೆ ಹಿಡಿದರೇನಾಯ್ತು ?
ಕಾರ್ಯಕರ್ತರನಲ್ಲೆ ಉಳಿಸಲು ಸಾಕು ಬೇಕಾಯ್ತು"

# ಪೋಷಕರಿಗೆ ಕಿವಿ ಮಾತು



ಸಲಹಾಗಾರ್ತಿ : **ಆರ್. ಸೀತಾಲಕ್ಷ್ಮಿ**

ಆತ್ಮೀಯ ಪೋಷಕರೇ,

ನಿಮ್ಮ ಮಕ್ಕಳಿಗೆ ಪರೀಕ್ಷೆಗಳು ಮುಗಿದು ರಜೆ ಪ್ರಾರಂಭವಾಗಿದೆ. ಈ ಸಮಯ ನಿಮ್ಮ ಮಕ್ಕಳನ್ನು ಉತ್ತಮ ನಾಗರೀಕರನ್ನಾಗಿ ಬೆಳೆಸಲು ಸಹಕಾರಿ. ಅದಕ್ಕಾಗಿ ಈ ಕೆಳಗೆ ಕೊಟ್ಟಿರುವ ಕೆಲವೊಂದು ಸಲಹೆಗಳನ್ನು ನೀವು ಪರಿಗಣಿಸಬಹುದೇ ?

1. ಮುಂಜಾನೆ ಬೇಗ ಎದ್ದು, ಮಕ್ಕಳನ್ನು ಎಬ್ಬಿಸಿ ಅವರನ್ನು ವಾಯುವಿಹಾರಕ್ಕೆ ಕರೆದುಕೊಂಡು ಹೋಗಿರಿ. ಇದರಿಂದ ನಿಮ್ಮ ಆರೋಗ್ಯವೂ ಸುಧಾರಿಸಿ, ನಿಮ್ಮ ಮಕ್ಕಳಿಗೆ ವ್ಯಾಯಾಮ ಮಾಡುವ ಸಂಸ್ಕಾರವನ್ನು ನೀಡಿದಂತಾಗುತ್ತದೆ.

2. ಬೆಳಗಿನ ಉಪಹಾರವನ್ನು ಹಾಗೂ ಭೋಜನವನ್ನು ಒಟ್ಟಿಗೆ ಕೂತು ಸ್ವೀಕರಿಸಿ, ಭೋಜನಕ್ಕೆ ಮುನ್ನ ಇಂದಿನ ಅನ್ನವನ್ನು ಕರುಣಿಸಿದ ಭಗವಂತನನ್ನು ಕೈಮುಗಿದು ಸ್ಮರಿಸಿ. ಇದರಿಂದ ನಿಮ್ಮ ಮಕ್ಕಳಿಗೆ ಕೃತಜ್ಞತೆಯ ಸಂಸ್ಕಾರವನ್ನು ನೀಡಿದಂತೆ ಆಗುತ್ತದೆ.

3. ನಿಮ್ಮ ಮಕ್ಕಳಿಗೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಮಹಾತ್ಮರ ಜೀವನಚರಿತ್ರೆ (ರಾಷ್ಟ್ರೋತ್ಥಾನ ಪ್ರಕಾಶನದ ಭಾರತ ಭಾರತಿ ಪುಸ್ತಕ ಮಾಲೆ) ರಾಮಾಯಣ, ಮಹಾಭಾರತ, ಪಂಚತಂತ್ರ ನೀತಿಕಥೆಗಳು ಮುಂತಾದ ಪುಸ್ತಕಗಳನ್ನು ಕೊಟ್ಟು ಓದಿಸಿರಿ. ಅವರು ಓದಿದ ಪುಸ್ತಕಗಳ ಬಗ್ಗೆ ಅವರೊಂದಿಗೆ ಕೂತು ಚರ್ಚಿಸಿರಿ. ಇದರಿಂದ ಅವರಿಗೆ ಜ್ಞಾನಾರ್ಜನೆಯ ಜೊತೆ ನಮ್ಮ ಸಂಸ್ಕೃತಿಯ ಪರಿಚಯವೂ ಆಗುತ್ತದೆ.

4. ನಿಮ್ಮ ಮಕ್ಕಳಿಗೆ ಈ ಬಿಡುವಿನ ಸಮಯವನ್ನು ಸದುಪಯೋಗ ಮಾಡಿಕೊಳ್ಳಲು ಕೆಲವು ಹವ್ಯಾಸಗಳನ್ನು ಕಲಿಸಿರಿ. ಉದಾಹರಣೆಗೆ ಪುಸ್ತಕಕ್ಕೆ ರಟ್ಟು ಹಾಕುವುದು, ಚಿತ್ರ ಬಿಡಿಸುವುದು, ಕಸೂತಿ ಮಾಡುವುದು, ರಂಗೋಲೆ ಹಾಕುವುದು, ಹಾಡು ಕಲಿಸುವುದು, ತಮ್ಮ ಬಟ್ಟೆಗೆ ತಾವೇ ಗುಂಡಿ ಹಾಕುವುದು. ಉಂಡ ತಟ್ಟೆಯನ್ನು ತಾವೇ ತೊಳೆದುಕೊಳ್ಳುವುದು, ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುವುದು ಮುಂತಾದವು.

5. ಮಕ್ಕಳನ್ನು ಸಣ್ಣಪುಟ್ಟ ಮನೆಗೆಲಸದಲ್ಲಿ ತೊಡಗಿಸಿ. ಉದಾಹರಣೆಗೆ ಗಿಡಕ್ಕೆ ನೀರುಹಾಕುವುದು, ತೊಳೆದ ಪಾತ್ರೆಯನ್ನು ಜೋಡಿಸುವುದು. ಕುರ್ಚಿ ಮೇಜು ಶುಚಿಗೊಳಿಸುವುದು ಇತ್ಯಾದಿ.

6. ಮಕ್ಕಳಲ್ಲಿ ಸೇವಾಭಾವನೆಯನ್ನು ಮೂಡಿಸಲು ಅವರನ್ನು ಯಾವುದಾದರೂ ಸಮಾಜ ಸೇವಾಕಾರ್ಯದಲ್ಲಿ ತೊಡಗಿಸಿ. ಉದಾಹರಣೆಗೆ ದೇವಸ್ಥಾನದ ಆವರಣವನ್ನು ಶುಚಿಗೊಳಿಸುವುದು, ಭಕ್ತರಿಗೆ ಕುಂಕುಮ ಪ್ರಸಾದ ತೆಗೆದುಕೊಳ್ಳಲು ಕಾಗದವನ್ನು ಕೊಡುವುದು, ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳಿಗೆ ಹಣ್ಣು ಹಂಚುವುದು, ಸಾಂತ್ವನ ಹೇಳುವುದು, ಅಕ್ಕಪಕ್ಕದ ಮನೆಯ ಮಕ್ಕಳಿಗೆ ಪಾಠ ಹೇಳಿಕೊಡುವುದು.

7. ನಿಮ್ಮ ಮಕ್ಕಳು ಮುಂದಿನ ತರಗತಿಯ ವಿಷಯಗಳನ್ನು ಅಲ್ಪ ಸ್ವಲ್ಪ ಕಲಿಯಲು ಇದು ಸುಸಮಯ ಅದಕ್ಕೆ ಪ್ರೋತ್ಸಾಹ ಕೊಡಿ.

8. ಬೇಸಿಗೆಯ ಬಿಸಿಲು ಆರೋಗ್ಯಕ್ಕೆ ಒಳ್ಳೆಯದಲ್ಲ. ಆದ್ದರಿಂದ ಮನೆಯಲ್ಲೆ ಆಡಬಹುದಾದ ಚೆಸ್, ಕೇರಮ್, ಚೌಕಾಭಾರ, ಪಗಡೆ, ಕೈಮೇಲ್ ಕಲ್ಲು, ಅಳಗುಳಿ ಮಣೆ ಇತ್ಯಾದಿ ಆಟಗಳನ್ನು ಹೇಳಿಕೊಡಿ. ಮತ್ತು ಆಡಲು ಪ್ರೋತ್ಸಾಹಿಸಿ.

9. ಇಂದು ನಮ್ಮಲ್ಲಿ ಪರಿವಾರ ಸಂಬಂಧಗಳು ನಶಿಸುತ್ತಿವೆ. ಅದಕ್ಕಾಗಿ ನಿಮ್ಮ ಮಕ್ಕಳನ್ನು, ಈ ರಜೆಯಲ್ಲಾದರೂ ಅಜ್ಜಿ–ತಾತನ ಮನೆ, ಸೋದರ ಮಾವ, ಚಿಕ್ಕಪ್ಪನ ಮನೆ, ಹೀಗೆ ನಿಮ್ಮ ಹತ್ತಿರದ ಸಂಬಂಧಿಗಳ ಮನೆಗೆ ಕರೆದುಕೊಂಡು ಹೋಗಿರಿ. ನಿಮಗೆ ಬಿಡುವಿಲ್ಲದಿದ್ದರೆ ಮಕ್ಕಳನ್ನಾದರೂ ನಾಲ್ಕು ದಿನ ಕಳಿಸಿಕೊಡಿ. ಇದರಿಂದ ಪರಸ್ಪರರ ಸಂಬಂಧದ ಕೊಂಡಿ ಗಟ್ಟಿಯಾಗುತ್ತದೆ.




## ಗಡಿನಾಡ ಕನ್ನಡ ಶಾಲೆಗೆ ನೂರು ತುಂಬಿದ ಹರುಷ

ಆಂಧ್ರದ ಕರ್ನೂಲು ಜಿಲ್ಲೆಯ ಆದವಾನಿ ತಾಲ್ಲೂಕಿನ ಕಾತಾಳಂ ಮಂಡಲದ ಸದಿಚಾಗಿ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಈಗ ನೂರು ತುಂಬಿದ ಹರುಷ. 10–1–1913ರಲ್ಲಿ ಆಗ ಬಳ್ಳಾರಿ ಜಿಲ್ಲೆಯಲ್ಲಿದ್ದ ಈ ಗ್ರಾಮದಲ್ಲಿ ಕನ್ನಡಶಾಲೆಯನ್ನು ತೆರೆಯಲಾಗಿತ್ತು. ಭಾಷಾವಾರು ಪ್ರಾಂತ ರಚನೆಯ ವೇಳೆಯಲ್ಲಿ ಆದವಾನಿ, ಆಲೂರು, ರಾಯದುರ್ಗ ತಾಲ್ಲೂಕುಗಳನ್ನು ಬಳ್ಳಾರಿ ಜಿಲ್ಲೆಯಿಂದ ತೆಗೆದು ಆಂಧ್ರಕ್ಕೆ ಸೇರಿಸಲಾಗಿತ್ತು. ಆ ಸಂದರ್ಭದಲ್ಲಿ ಶೇ.100 ರಷ್ಟು ಕನ್ನಡ ಮಾತನಾಡುವ ಇತರ ಗ್ರಾಮಗಳ ಜೊತೆ ಈ ಗ್ರಾಮವನ್ನೂ ದುರದೃಷ್ಟಕರವಾಗಿ ಆಂಧ್ರಕ್ಕೆ ಸೇರಿಸಲಾಯಿತು. ಇಷ್ಟಾದರೂ ಈ ಗ್ರಾಮಸ್ಥರು ತಮ್ಮ ಕನ್ನಡ ಪ್ರೇಮವನ್ನು ಬಿಡದೆ ಮಕ್ಕಳನ್ನು ಕನ್ನಡ ಶಾಲೆಗೇ ಸೇರಿಸುತ್ತಾ ಬಂದರು. ಅಲ್ಲಿ ಕನ್ನಡ ಭಾಷೆ ಉಳಿಯುವಂತೆ ಕಾಪಾಡಿದರು. ಈಗ ಈ ಶಾಲೆಗೆ 100ರ ಸಂಭ್ರಮ. ಈ ಸಂದರ್ಭದಲ್ಲಿ ಶಾಲೆ ತನ್ನ ಶತಮಾನೋತ್ಸವವನ್ನು ಆಚರಿಸಿಕೊಂಡಿತು. ರಾಜ್ಯದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ಸ್ಥಿತಿಗತಿ ಹಾಗೂ ಸರಕಾರದ ಒಲವು ಇರುವಾಗ ಗಡಿನಾಡ ಈ ಕನ್ನಡ ಶಾಲೆ ಮಹತ್ವದ್ದು ಎಂದೆನಿಸುತ್ತದೆ!

## ಬಾಂಗ್ಲಾದೇಶಿ ಹಿಂದುಗಳನ್ನು ರಕ್ಷಿಸಲು 'ಅಮ್ನೆಸ್ಟಿ ಇಂಟರ್ ನ್ಯಾಷನಲ್ ಕರೆ

ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ, ಸಹಬಾಳ್ವೆ, ಮಾನವೀಯ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ದುಡಿಯುತ್ತಿರುವ ಸಂಸ್ಥೆ ಅಮ್ನೆಸ್ಟಿ ಇಂಟರ್ ನ್ಯಾಷನಲ್. ಈ ಸಂಸ್ಥೆಯು ಬಾಂಗ್ಲಾ ಸರ್ಕಾರಕ್ಕೆ, ತನ್ನ ಅಲ್ಪಸಂಖ್ಯಾತ ಹಿಂದುಗಳಿಗೆ ತುರ್ತಾಗಿ ರಕ್ಷಣೆ ಒದಗಿಸುವಂತೆ ಕರೆನೀಡಿದೆ. ಬಾಂಗ್ಲಾದೇಶವೀಗ ಆಂತರಿಕ ಬಿಕ್ಕಟ್ಟಿನತ್ತ ಸಾಗುತ್ತಿದ್ದು, ಆತಂಕಕಾರೀ ಸ್ಥಿತಿಯನ್ನು ತಲುಪುತ್ತಿದೆ ಎಂದು ಎಚ್ಚರಿಸಿರುವ ಅಮ್ನೆಸ್ಟಿ, ಪ್ರಸ್ತುತ ಅಲ್ಲಿನ ಅಲ್ಪಸಂಖ್ಯಾತ ಹಿಂದು ಸಮಾಜವು ಸಂಕಷ್ಟ ಎದುರಿಸುತ್ತಿದೆ ಎಂದು ಮರುಗಿದೆ. ಸಂಸ್ಥೆಯ ಸಂಶೋಧಕ ಅಧಿಕಾರಿ ಅಬ್ಬಾಸ್ ಫಯಾಜ್, ಬಾಂಗ್ಲಾದೇಶದಲ್ಲಿ ಹಿಂದು ಧರ್ಮಕ್ಕೆ ಸೇರಿದವರೆಂಬ ಒಂದೇ ಕಾರಣಕ್ಕಾಗಿ ಯಾವುದೇ ಇತರ ಕಾರಣಗಳಿಲ್ಲದಿದ್ದಾಗ್ಯೂ ಹಿಂದುಗಳು ಸಾಮೂಹಿಕ ಹಿಂಸೆಗೆ ಒಳಗಾಗುತ್ತಿರುವುದು ಆಶ್ಚರ್ಯಕರ ಮತ್ತು ಖಂಡನೀಯ ಎಂದು ಅಭಿಪ್ರಾಯ ಪಡುತ್ತಾರೆ.

'ಬಾಂಗ್ಲಾದೇಶದ ಹಿಂದು ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರದ ಅಲೆ' ಎಂಬ ಅಲ್ಲಿನ ಪ್ರಸಕ್ತ ಅಮ್ನೆಸ್ಟಿಯ ಅಧ್ಯಯನ ವರದಿ, ಅಲ್ಲಿನ ಕಟು ವಾಸ್ತವಗಳ ಮೇಲೆ ಬೆಳಕು ಚೆಲ್ಲುತ್ತದೆ. 1971 ರ ಬಾಂಗ್ಲಾ ವಿಮೋಚನೆಯ ವೇಳೆ 30 ಲಕ್ಷಕ್ಕೂ ಮಿಗಿಲಾಗಿ ಅಮಾಯಕರ ಹತ್ಯಾಕಾಂಡ ಹಾಗೂ 2 ಲಕ್ಷಕ್ಕೂ ಅಧಿಕ ಮಹಿಳೆಯರ ಮೇಲೆ ಅತ್ಯಾಚಾರ ನಡೆದುದಕ್ಕೆ ಸಂಬಂಧಿಸಿ ಜಮಾತೆ ಇಸ್ಲಾಮಿಯ ನೇತಾರ ದಿಲ್ವಾರ್ ಹುಸೇನ್ ಸಯ್ಯದಿಗೆ ಅಲ್ಲಿನ ನ್ಯಾಯಾಲಯ ಹಾಗೂ ಅಂತರರಾಷ್ಟ್ರೀಯ ನ್ಯಾಯಪೀಠಗಳೂ ಮರಣದಂಡನೆ ಶಿಕ್ಷೆ ವಿಧಿಸಲಾಗಿರುವುದರ ವಿರುದ್ಧ ಜಮಾತೆ ಇಸ್ಲಾಮಿ ಹಾಗೂ ಆ ಸಂಘಟನೆಯ ವಿದ್ಯಾರ್ಥಿದಳ, 'ಛಾತ್ರ ಶಿಬಿರ್' ಹಿಂದುಗಳ ಮೇಲೆ ಇನ್ನಿಲ್ಲದ ಹಿಂಸಾಚಾರ ಎಸಗುತ್ತಿದೆ ಎಂದು ಆಕ್ಷೇಪಿಸಿದೆ.

## ಸೌರ ವಿದ್ಯುತ್ ಬಳಸಿ ಹೊಲಕ್ಕೆ ನೀರುಣಿಸುತ್ತಿರುವ ಬಯಲು ಸೀಮೆಯ ರೈತ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ದಾಸನಾಳ ಗ್ರಾಮದ ರೈತ ಪಿ.ಶ್ರೀನಿವಾಸ್ ಅವರು ತೀವ್ರ ವಿದ್ಯುತ್ ಅಭಾವದಿಂದ ಕೃಷಿಗೆ ಒದಗಿರುವ ಸಮಸ್ಯೆಗೆ ಸೌರವಿದ್ಯುತ್ ಪರಿಹಾರವನ್ನು ಕಂಡುಕೊಂಡಿದ್ದಾರೆ. ಹೊಲಕ್ಕೆ ಅಡೆತಡೆಗಳಿಲ್ಲದೆ ನೀರು ಒದಗಿಸಲು ಅವರು ತಮ್ಮ ಜಮೀನಿನಲ್ಲಿ ರೂಪಾಯಿ 6.40 ಲಕ್ಷ ವೆಚ್ಚದಲ್ಲಿ ಸೌರವಿದ್ಯುತ್ ಘಟಕ ಸ್ಥಾಪಿಸಿದ್ದಾರೆ. ತಮ್ಮ 9 ಎಕರೆ ಜಮೀನಿಗೆ ನೀರು ಹರಿಸಲು ಅವರು ತಲಾ ಮೂರು ಎಚ್.ಪಿ. ಯ ಎರಡು ಸೋಲಾರ್ ಘಟಕಗಳನ್ನು ತೆರೆದಿದ್ದಾರೆ. ಒಂದು ವಿದ್ಯುತ್ ಘಟಕವು ಒಂದು ಗಂಟೆಗೆ 18 ರಿಂದ 20 ಯೂನಿಟ್ ವಿದ್ಯುತ್ ಅನ್ನು ಉತ್ಪಾದಿಸುತ್ತಿದೆ. ಕೇಂದ್ರಸರಕಾರ ಸೌರವಿದ್ಯುತ್ ಘಟಕ ಸ್ಥಾಪಿಸಲು, ಅದರ ಯೋಜನಾ ಮೊತ್ತದ ಶೇ 30 ರಷ್ಟನ್ನು ರಿಯಾಯಿತಿಯಾಗಿ ನೀಡುತ್ತಿದೆ.

# ಪ್ರಶ್ನೋತ್ತರ

● ಸಿ. ಪಾಟೀಲ್

ಅಂಚೆ ತೆರಪಿನ ದೂರ ಶಿಕ್ಷಣದ ಮೂಲಕ ನಾನು ಎಂ.ಎ ಕನ್ನಡ ಮುಗಿಸಿದ್ದೇನೆ. ಕಳೆದ 11 ವರ್ಷಗಳಿಂದ ಸರಕಾರಿ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈಗ ಪದವಿ ಪೂರ್ವ ಕಾಲೇಜುಗಳಿಗೆ ಬಡ್ತಿ ಕೊಡಲು ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗುತ್ತಿದೆ ಎಂದು ಸುದ್ಧಿ ಇದೆ. ಆದರೆ ಪದೋನ್ನತಿ ಪಡೆಯ ಬೇಕಾದರೆ ಶೇಕಡಾ ಎಷ್ಟು ಅಂಕಗಳನ್ನು ಪಡೆಯಬೇಕು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿಗೆ ಸೇವೆಗೆ ಸೇರಿರುವ ದಿನಾಂಕವನ್ನು ಪರಿಗಣಿಸುವರೋ ಅಥವಾ ಎಂ.ಎ ಮುಗಿಸಿರುವ ದಿನಾಂಕವನ್ನು ಪರಿಗಣಿಸುವರೋ ಎನ್ನುವುದನ್ನು ತಿಳಿಸಿರಿ.

ನನ್ನ ಸೇವೆಗೆ ಸೇರಿದ ದಿನಾಂಕ 02.04.2002 ಎಂ.ಎ. ಕನ್ನಡ ಮುಕ್ತಾಯ ಗೊಳಿಸಿದ ದಿನಾಂಕ. ಏಪ್ರಿಲ್ 2010.

**ಸಂಗಮನಾಥ ಪೂಜಾರಿ,** ಬೀದರ್

ನೀವು ತಿಳಿಸಿರುವ ಪ್ರಕಾರ ಸರ್ಕಾರಿ ಪ್ರೌಢಶಾಲಾ ಶಿಕ್ಷಕರಾಗಿ ನೀವು ಸೇವೆ ಮಾಡುತ್ತಿರುವುದರಿಂದಾಗಿ ಪದವಿಪೂರ್ವ ಕಾಲೇಜುಗಳಿಗೆ ಉಪನ್ಯಾಸಕರಾಗಿ ಪದೋನ್ನತಿ ಹೊಂದಲು ಯಾವುದೇ ನಿರ್ಧಿಷ್ಟ ಶೇಕಡಾವಾರು ಅಂಕಗಳನ್ನು ಸಿದ್ಧಪಡಿಸಿಲ್ಲ. ನೀವು ಸ್ನಾತಕೋತ್ತರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ಸಾಕು. ನಿಮ್ಮ ಸೇವಾ ದಿನಾಂಕ ಗಮನಿಸಿದಾಗ ನೀವು ಸರಕಾರಿ ಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿ ಸೇವೆ ಸಲ್ಲಿಸಬೇಕಾದ್ದು ಕಡ್ಡಾಯ.

ಪದವಿ ಪೂರ್ವ ಉಪನ್ಯಾಸಕ ಹುದ್ಧೆಗೆ ಪದೋನ್ನತಿ ಹೊಂದಲು ನೀವು ಯಾವ ವರ್ಷ ಸೇವೆಗೆ ಸೇರಿರುವಿರೋ ಅದೇ ವರ್ಷವನ್ನು ಜೇಷ್ಠತೆಗೆ ಪರಿಗಣಿಸುತ್ತಾರೆ. ಹೀಗಾಗಿ ನೀವು ಸ್ನಾತಕೋತ್ತರ ಪದವಿ ಮುಕ್ತಾಯ ಗೊಳಿಸಿದ ದಿನಾಂಕ ಪರಿಗಣನೆಗೆ ಬರುವುದಿಲ್ಲ. ಪದೋನ್ನತಿಗೆ ನಿಮ್ಮ ಸರದಿ ಬರುವವರೆಗೆ ತಾಳ್ಮೆಯಿಂದ ಕಾಯಿರಿ. 'ತಾಳಿದವನು ಬಾಳಿಯಾನು' ಎಂಬ ಗಾದೆ ಮಾತೇ ಇದೆಯಲ್ಲ.

## ಹೊಸ ವರ್ಷದ ದಿನಚರಿ ಬಿಡುಗಡೆ


ಡಿಸೆಂಬರ್ ಅಂತ್ಯ ಬಂತೆಂದರೆ ಎಲ್ಲರಿಗೂ ಜನವರಿಯ ಕ್ಯಾಲೆಂಡರ್ ಪಡೆಯುವ ಕಾತುರ. ಕೊಳ್ಳುವವರು ಕಡಿಮೆ. ಕಾಡಿಬೇಡಿ ಪಡೆಯುವವರೇ ಅಧಿಕ. ಜನವರಿ ನಮ್ಮ ಹೊಸವರ್ಷ ಅಲ್ಲವೆಂದು ಬಹಳ ಜನರಿಗೆ ಗೊತ್ತೇ ಇಲ್ಲ.

ಮೊನ್ನೆ 8ನೇ ತಾರೀಕು ಶಿಕ್ಷಕ ಸಂಘದ ಕೇಂದ್ರ ಕಛೇರಿಯಲ್ಲಿ ಬೆಂಗಳೂರು ಉತ್ತರ ಜಿಲ್ಲಾ ಘಟಕದವರು ಒಂದು ವಿಶೇಷ ಕಾರ್ಯಕ್ರಮ ಏರ್ಪಡಿಸಿದ್ದರು. ಅದು 'ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ'. ಕಳೆದ 5 ವರ್ಷಗಳಿಂದ ಅವರು ಪ್ರತಿ ವರ್ಷ ನಮ್ಮ ಹೊಸ ವರ್ಷ ಯುಗಾದಿಯಿಂದ ಯುಗಾದಿಯವರೆಗಿನ ಕೈಪಿಡಿ ದಿನದರ್ಶಿನಿಯನ್ನು ಬಿಡುಗಡೆ ಮಾಡುತ್ತಾ ಬಂದಿದ್ದಾರೆ. ಅದರಲ್ಲಿ ಶಿಕ್ಷಕರಿಗೆ ಉಪಯುಕ್ತವಾದ ಅನೇಕ ಸಂಗತಿಗಳನ್ನು ಮುದ್ರಿಸಿರುತ್ತಾರೆ. ಹಲವಾರು ಶಿಕ್ಷಕರು ಈ ಕ್ಯಾಲೆಂಡರ್‌ಗಾಗಿ ಕಾಯುತ್ತಾ ಎಂದು ಕೊಡುವಿರಿ ಎಂದು ಕಾತುರದಿಂದ ಕೇಳುತ್ತಾರೆ.

ಅಂದಿನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದ ಶಾಸಕ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು "ಶಿಕ್ಷಕ ಸಂಘವೊಂದು ಇಂಥ ಕೆಲಸ ಮಾಡುತ್ತಿರುವುದು ನನಗೆ ಆಶ್ಚರ್ಯ ಉಂಟು ಮಾಡುತ್ತಿದೆ. ಸಾಮಾನ್ಯವಾಗಿ ಶಿಕ್ಷಕ ಸಂಘಗಳು ಕೇವಲ ಸಂಬಳಸಾರಿಗೆ ಹಕ್ಕುಗಳ ಬಗ್ಗೆ ಮಾತ್ರ ಮಾತನಾಡುತ್ತದೆ. ಆದರೆ ಶಿಕ್ಷಕರಿಗೆ ನಮ್ಮ ನಾಡಿನ ಸಂಸ್ಕೃತಿ ಪರಂಪರೆಗಳನ್ನು ತಿಳಿಸುವ ಅವರಲ್ಲಿ ಕರ್ತವ್ಯ ಜಾಗೃತಿ ಉಂಟು ಮಾಡುವ ಕೆಲಸಗಳನ್ನೂ ಮಾಡುವುದಿಲ್ಲ. ಆದರೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಇದಕ್ಕೆ ಅಪವಾದ. ಈ ಕ್ಯಾಲೆಂಡರನ್ನು ಉಚಿತವಾಗಿ ವಿತರಿಸಿ ಶಿಕ್ಷಕರಲ್ಲಿ ಅವರ ಮೂಲಕ ವಿದ್ಯಾರ್ಥಿಗಳಲ್ಲಿ, ಯುಗಾದಿಯಿಂದ ನಮ್ಮ ಹೊಸ ವರುಷ ಪ್ರಾರಂಭವಾಗುತ್ತದೆ ಎಂಬ ಮೌಲ್ಯವನ್ನು ಬಿತ್ತುತ್ತಿದೆ" ಎಂದು ನುಡಿಯುತ್ತಾ ಶಿಕ್ಷಕ ಸಂಘಕ್ಕೆ ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರಾದ ಪ್ರೊ. ಕೆ. ನರಹರಿಯವರು ಇಂಥಾ ಉತ್ತಮ ಕೆಲಸಗಳನ್ನು ಶಿಕ್ಷಕ ಸಂಘವು ಸದಾ ಕಾಲಕ್ಕೂ ನಡೆಸಿಕೊಂಡು ಬರಲಿ ಎಂದು ಹಾರೈಸಿದರು. ಸಮಾರಂಭದಲ್ಲಿ ಅನೇಕ ದಾನಿಗಳು ಉಪಸ್ಥಿತರಿದ್ದರು.

ಅಧ್ಯಕ್ಷರಾದ ಶ್ರೀ ಜೆ. ಎಂ. ಜೋಷಿಯವರು ಎಲ್ಲರನ್ನೂ ಸ್ವಾಗತಿಸಿ ಪರಿಚಯ ಮಾಡಿಕೊಟ್ಟರು. ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ತಾಂಬೆಯವರು ಕಾರ್ಯಕ್ರಮವನ್ನು ನಿರೂಪಿಸಿ ವಂದನೆಗಳನ್ನು ಸಲ್ಲಿಸಿದರು. ಪಾಲ್ಗೊಂಡಿದ್ದ ಎಲ್ಲ ಶಿಕ್ಷಕರಿಗೂ ಉಚಿತವಾಗಿ ದಿನದರ್ಶಿನಿಯನ್ನು ವಿತರಿಸಲಾಯಿತು. ●



# ಭಾರತ ಪುನರುತ್ಥಾನದ ಹರಿಕಾರ

ನಮ್ಮೀ ಭಾರತ ಭೂಮಿಯನ್ನು 'ರತ್ನ ಗರ್ಭಾ' ಎಂದು ಕರೆದಿದ್ದಾರೆ. ರತ್ನಗರ್ಭ ಎಂಬ ವಿಶೇಷಣ ಕೇವಲ ಭೂಮಿಯಾಳದಲ್ಲಿ ಸಿಗುವ ಬಂಗಾರ ತಾಮ್ರ ಕಬ್ಬಿಣ ಮುಂತಾದ ಖನಿಜಗಳಿಗಷ್ಟೇ ಸಲ್ಲುವುದಿಲ್ಲ, ಬದಲಿಗೆ ಈ ನಾಡಿನಲ್ಲಿ ಜನ್ಮ ತಳೆದ ಅಸಂಖ್ಯ ಸಾಧು ಸಂತರು, ಸಮಾಜ ಸುಧಾರಕರು ರಾಷ್ಟ್ರ ಜೀವನದ ವಿವಿಧಮುಖಗಳಲ್ಲಿ ದೇಶೋದ್ಧಾರಕ್ಕಾಗಿ ಸೇವೆ ಸಲ್ಲಿಸಿದವರು ಮುಂತಾದ ಮಾನವರತ್ನಗಳನ್ನೂ ಒಳಗೊಳ್ಳುತ್ತದೆ. ಇಂಥಹ ರತ್ನಗಳಲ್ಲೊಂದು, ಮಹಾರಾಷ್ಟ್ರದ ನಾಗಪುರದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ, 1889 ಏಪ್ರಿಲ್1ರ ಯುಗಾದಿಯಂದು ಜನ್ಮ ತಳೆದ ಕೇಶವ ಬಲಿರಾಮ ಹೆಡಗೆವಾರ್. ತಂದೆ ಬಲಿರಾಮ ಪಂತ್. ತಾಯಿ ರೇವತಿಬಾಯಿ. ಹಾಸಿ ಹೊದೆಯಲು ಸಾಕಷ್ಟಿದ್ದ ಬಡತನ. ತಂದೆಯವರ ವೃತ್ತಿಯೇ ಅಂಥದ್ದು, ಅಂದಿನ ಕಾಲದ ಪೌರೋಹಿತ್ಯ. ಆದರೂ ಉತ್ತಮ ಸಂಸ್ಕಾರ ನೀಡಲು ಬೇಕಾದ ಮೌಲ್ಯಗಳಿಗೇನೂ ಬಡತನವಿರಲಿಲ್ಲ. ಹೀಗಾಗಿ ಕೇಶವ ಮತ್ತು ಅವನ ಇಬ್ಬರು ಅಣ್ಣಂದಿರು ಮಹಾದೇವ ಮತ್ತು ಸೀತಾರಾಮರಿಗೆ ಮತ್ತೊಬ್ಬರ ಕಷ್ಟಗಳಿಗೆ ಮರುಗುವ, ಅನ್ಯಾಯವನ್ನು ದಿಟ್ಟತನದಿಂದ ಎದುರಿಸುವ ಸಂಸ್ಕಾರ ಬಾಲ್ಯದಿಂದಲೇ ಇತ್ತು.

ನಾಗಪುರದ ಸೀತಾಬರ್ಡಿ ಕೋಟೆಯ ಮೇಲೆ ಹಾರಾಡುತ್ತಿದ್ದ ಆಂಗ್ಲರ ಧ್ವಜ ಯೂನಿಯನ್ ಜಾಕ್ ಕಂಡಾಗಲೆಲ್ಲಾ ಕೇಶವನಿಗೆ ಅದು ನಮ್ಮ ದೇಶದ ಬಾವುಟ ಅಲ್ಲವಲ್ಲ! ಇದೇಕೆ ಇಲ್ಲಿ ಹಾರಾಡುತ್ತಿದೆ ಎಂಬ ತೀವ್ರ ಭಾವನೆ ಕಾಡುತ್ತಿತ್ತು. ಅದಕ್ಕೂ ಮೊದಲು ವಿಕ್ಟೋರಿಯಾ ಮಹಾರಾಣಿಯ ಜನ್ಮ ದಿನ ಶಾಲೆಯಲ್ಲಿ ಕೊಟ್ಟ ಸಿಹಿ ತಿಂಡಿಯನ್ನು ಮನೆಗೆ ತಂದು ಮೂಲೆಗೆ ಎಸೆದು, ಆಕೆಯ ಜನ್ಮದಿನಕ್ಕೂ ನಮಗೂ ಸಂಬಂಧವೇನೆಂದು ಚಿಂತಿಸಿದ ಬಾಲ ಮನಸ್ಸು ಕೇಶವನದು. ಆಗಲೇ ನಾಡಿಗಾಗಿ ಏನಾದರೂ ಮಾಡಬೇಕೆಂಬ ದೇಶಭಕ್ತಿಯ ಬೀಜ ಆ ಪುಟ್ಟ ಮನಸ್ಸಿನಲ್ಲಿ ಮೊಳಕೆಯೊಡದದ್ದು. ಗೆಳೆಯರೊಂದಿಗೆ ಕೂಡಿ ಓದಿಕೊಳ್ಳುತ್ತಿದ್ದ ತಮ್ಮ ನೆಚ್ಚಿನ ಶಿಕ್ಷಕರ ಮನೆಯ ಕೊಠಡಿಯಿಂದ ಸುರಂಗ ತೋಡಿ, ಕೋಟೆಯ ಮೇಲೆ ಹಾರುತ್ತಿದ್ದ ಆಂಗ್ಲರ ಧ್ವಜ ಇಳಿಸುವ ಪ್ರಯತ್ನ ಮಾಡಿದ್ದು. ನೀಲ್ ಸಿಟ್ ಹೈಸ್ಕೂಲಿನಲ್ಲಿ ತನಿಖಾಧಿಕಾರಿ ಬಂದಾಗ 'ವಂದೇ ಮಾತರಂ' ಮಂತ್ರ ಮೊಳಗಿಸಿ ಶಾಲೆಯಿಂದ ಹೊರ ಹಾಕಿಸಿಕೊಂಡಿದ್ದು ಅದರ ಫಲವೇ.

ಕೇಶವ ಬೆಳೆದಂತೆಲ್ಲಾ ದೇಶಭಕ್ತಿಯ ಸಸಿಯೂ ಬೆಳೆದು ಹೆಮ್ಮರವಾಗತೊಡಗಿತು. ದೇಶವೇ ಮನೆ, ಸಕಲ ದೇಶವಾಸಿಗಳೂ ಬಂಧುಗಳು, ಅವರ ಸುಖವೇ ನನ್ನ ಸುಖ, ಅವರ ದುಃಖವೇ ನನ್ನ ದುಃಖ ಎಂಬ ಭಾವ ಬಲಿಯಿತು. ಅಂದಿನ ದೇಶದಲ್ಲಿನ ವಾತಾವರಣವೂ ಇದಕ್ಕೆ ಪೂರಕವಾಗಿತ್ತು. ಕೇಶವನ ಮನಸ್ಸು ನಾಡಬಿಡುಗಡೆಗಾಗಿ ತುಡಿಯಿತು.


ನಾಗಪುರದ ಸಾಮಾಜಿಕ ಹಿರಿಯರ ಸಹಕಾರದಿಂದ ವೈದ್ಯಕೀಯ ವ್ಯಾಸಂಗ ಮಾಡಲು ಕೇಶವ ಕಲ್ಕತ್ತೆಗೆ ತೆರಳಿದ. ವ್ಯಾಸಂಗ ನೆಪ ಮಾತ್ರ, ಕ್ರಾಂತಿಕಾರಿಯಾಗುವುದು ಬಾಳಗುರಿ. ಪದವಿ ಪಡೆದರೂ ವೃತ್ತಿ ಮಾಡದಿರುವ ನಿರ್ಧಾರ. ಕೇಶವ, ಡಾ. ಕೇಶವರಾವ್ ಆಗಿ ನಾಗಪುರಕ್ಕೆ ಹಿಂದಿರುಗಿದಾಗ ಚಿಕ್ಕಪ್ಪನಿಗೆ, ಅತ್ತಿಗೆಯರಿಗೆ ವೈದ್ಯಕೀಯ ಪದವಿ ಪಡೆದಿರುವ ಮನೆಯ ಮಗ ಕೈತುಂಬ ಸಂಬಳ ತಂದು ಮನೆಗೆ ಆಧಾರವಾಗುತ್ತಾನೆ ಎಂಬ ಕನಸು. ಆದರೆ ಡಾ. ಕೇಶವರಾವ್ ಸಹಸ್ರ ವರ್ಷಗಳ ಪರಕೀಯರ ಆಳ್ವಿಕೆಗೊಳಗಾಗುವ ಕಾಯಿಲೆ ಈ ದೇಶಕ್ಕೇಕೆ ಬಂತು? ಅದರ ಚಿಕಿತ್ಸೆಗೇನು ಮಾರ್ಗ ಎಂಬ ಚಿಂತೆಗೊಳಗಾಗಿದ್ದರು. ಮನೆಯವರಿಗೆ 'ದೇಶ ಇಂದು ಕಷ್ಟದಲ್ಲಿದೆ. ಅದಕ್ಕೆ ತಗಲಿರುವ ಭೀಕರ ವ್ಯಾಧಿಯನ್ನು ಗುಣಪಡಿಸುವ ಔಷಧಿ ಕಂಡು ಹಿಡಿಯುವುದಕ್ಕೇ ನನ್ನ ಜೀವನ ಮುಡಿಪು, ಇದಕ್ಕೆ ನಿಮ್ಮ ಸಹಕಾರವೂ ಇರಲೆಂದು ನನ್ನ ಪ್ರಾರ್ಥನೆ' ಎಂದು ಡಾ. ಕೇಶವರಾವ್ ನುಡಿದಾಗ ಮನೆಯವರ ಮಾತು ಮೌನವಾಯಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮಿಕಿ ಜೈಲು ಶಿಕ್ಷೆಗೊಳಗಾಗಿ ಜೈಲಿನಲ್ಲಿದ್ದಾಗ ಅವರ ಚಿಂತನೆಗಳಿಗೊಂದು ಮೂರ್ತ ರೂಪ ದೊರಕಿತು. ಎಲ್ಲಿಯವರಗೆ ದೇಶದ ಪ್ರತೀ ನಾಗರೀಕನ ಮನಸ್ಸಿನಲ್ಲೂ ತನ್ನ ಸ್ವ-ಸ್ವರೂಪದ ಜಾಗೃತಿಯಾಗುವುದಿಲ್ಲವೋ, ಎಲ್ಲಿಯವರೆಗೆ ಇವರೆಲ್ಲ ಒಗ್ಗೂಡಿ ಬಂದು ನಾಡದೇವಿಯ ಪೂಜೆ ಕೈಗೊಳ್ಳುವ ವ್ರತಧಾರಿಗಳಾಗುವುದಿಲ್ಲವೋ, ಅಲ್ಲಿಯವರೆಗೆ ಈ ದೇಶ ಪರಕೀಯರ ಧಾಳಿಗೊಳಗಾಗುವುದು ನಿಶ್ಚಿತ. ಅದಕ್ಕಾಗಿ ಸತ್ತಂತೆ ಮಲಗಿರುವ ಭಾರತೀಯರನ್ನು ಬಡಿದೆಬ್ಬಿಸುವ, ಅವರನ್ನು ಒಂದು ಸೂತ್ರದಲ್ಲಿ ಬಂಧಿಸಿಡುವ ಒಂದು ವ್ಯವಸ್ಥೆಯನ್ನು ರೂಪಿಸಬೇಕೆಂದು ನಿರ್ಧರಿಸಿದರು. ಜೈಲಿನಿಂದ ಬಿಡುಗಡೆಯಾಗಿ ಬಂದ ಕೂಡಲೇ ತಮ್ಮ ಚಿಂತನೆಗೊಂದು ಸರಳ ಮೂರ್ತರೂಪ ನೀಡಿದರು.

ಆಗ ಕೇಶವರಾವ್‌ಗೆ 35 ವರ್ಷ. ಒಂದಷ್ಟು ಕಿಶೋರರನ್ನು ಸೇರಿಸಿಕೊಂಡು ಪಾಳುಬಿದ್ದ ಜಾಗವನ್ನು ಶುದ್ಧಗೊಳಿಸಿ ಅಲ್ಲಿ ಅವರೊಂದಿಗೆ ಆಟ, ಹಾಡು, ಚರ್ಚೆ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಆಟಕ್ಕೆ ಆಕರ್ಷಿತರಾದ ವಿದ್ಯಾರ್ಥಿಗಳು ಕ್ರಮೇಣ ಅವರ ವಿಚಾರಕ್ಕೂ ಪ್ರಭಾವಿತರಾದರು. ಈ ರೀತಿ ಸೇರಿ ಒಂದು ಘಂಟೆಯ ಸಮಯ ಕಳೆಯುವುದಕ್ಕೆ 'ಶಾಖೆ' ಎಂದು ಕರೆದರು. ಕ್ರಮೇಣ ಇಂತಹ ಶಾಖೆಗಳು ನಾಗಪುರದ ಹಲವು ಬಡಾವಣೆಗಳಿಗೆ ಹಾಗೂ ಸುತ್ತಮುತ್ತಲಿನ ಊರುಗಳಿಗೆ ಪ್ರಸರಿಸಿತು. ಹೀಗೆ ಉದ್ಭವಗೊಂಡ 'ಸಂಘ-ಗಂಗೆ' ರಾಷ್ಟ್ರೀಯ ಸ್ವಯಂಸೇವಕ ಸಂಘವೆಂಬ ಹೆಸರಿನಲ್ಲಿ, ಇಂತಹ ಹಲವು ಸಹಸ್ರ ಶಾಖೆಗಳ ರೂಪದಲ್ಲಿ, ಭಾರತದಾದ್ಯಂತವಲ್ಲದೆ ವಿಶ್ವದ ಹಲವು ದೇಶಗಳಲ್ಲಿ ಹಬ್ಬಿದೆ. ಲಕ್ಷಾಂತರ ಸ್ವಯಂಸೇವಕರು ಲಕ್ಷಕ್ಕೂ ಮೀರಿ ಸಮಾಜ ಸೇವಾ ಚಟುವಟಿಕೆಗಳನ್ನು ಶಿಕ್ಷಣ, ಆರೋಗ್ಯ ಮುಂತಾದ ಹಲವು ಹತ್ತು ಕ್ಷೇತ್ರಗಳಲ್ಲಿ ನಡೆಸುತ್ತಿದ್ದಾರೆ. ಪ್ರಕೃತಿ ವಿಕೋಪದಿಂದ ಹಾನಿ ಉಂಟಾದಾಗ ಹಾನಿಗೊಳಗಾದವರ ಸೇವೆಗೆ ಮೊದಲು ಧಾವಿಸುವವರು ಈ ಸಂಘದ ಕಾರ್ಯಕರ್ತರೇ. ಈ ಬಗೆಯ ಚಟುವಟಿಕೆಗಳನ್ನು, ಈ ಕಾರ್ಯಕರ್ತರ ಬದ್ಧತೆಯನ್ನು ಕಂಡು ಕೋಟ್ಯಾಂತರ ಭಾರತೀಯರು 'ಭಾರತದ ಪುನರುತ್ಥಾನ' ಇವರಿಂದಲೇ ಸಾಧ್ಯ ಎಂದು ನಂಬಿದ್ದಾರೆ. ಮತ್ತು ಆ ದಿನಕ್ಕಾಗಿ ಕಾತುರದ ಕಣ್ಣುಗಳಿಂದ ಕಾಯುತ್ತಿದ್ದಾರೆ.

– ಸೀತಾಪ್ರಿಯ

# ಒಂದು ಪ್ರೇರಣಾದಾಯಿ ಘಟನೆ



1979 ಮಾತು. ಭಾರತದ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಸ್ವದೇಶಿ ರಾಕೆಟ್ ತಂತ್ರಜ್ಞಾನ ವಿಕಾಸ ಪ್ರಕಲ್ಪದ ಪ್ರಮುಖರಾಗಿದ್ದರು. ಹಲವು ಅನುಭವಿ ವಿಜ್ಞಾನಿಗಳಿದ್ದ ಆ ತಂಡದ ಪ್ರತಿಯೊಬ್ಬರೂ ವಾರದಲ್ಲಿ 60 ರಿಂದ 80 ಗಂಟೆಗಳ ಕಾಲ ಸ್ವೇಚ್ಛೆಯಿಂದ ಕೆಲಸ ಮಾಡುತ್ತಿದ್ದರು. ಸ್ವದೇಶಿ ರಾಕೆಟ್ ತಂತ್ರಜ್ಞಾನ ಸಿದ್ಧಿಯ ಪ್ರಬಲ ಹಂಬಲವು ಅವರಿಗೆ ಹಸಿವು, ಆಯಾಸ, ನಿದ್ದೆ ಎಲ್ಲವನ್ನೂ ಮರೆಸಿಬಿಟ್ಟಿತು. ಎಸ್.ಎಲ್.ವಿ –2ರ ಉಡಾವಣೆಯ ದಿನ ಮತ್ತು ಸಮಯ ಆದಾಗಲೇ ನಿರ್ಧಾರಿತವಾಗಿತ್ತು. ಎಲ್ಲರೂ ಆ ಗಳಿಗೆಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು.

ಅಂತಿಮ ಹಂತದಲ್ಲಿ ಆ ಗಗನ ನೌಕೆಯ ಕೂಲಂಕುಷ ಪರೀಕ್ಷೆ ನಡೆಯುತ್ತಿದ್ದಾಗ ಒಂದು ಕವಾಟ ಸರಿಯಿಲ್ಲದಿದ್ದುದು ಗಮನಕ್ಕೆ ಬಂತು. ಎರಡನೇ ಬಾರಿಯ ಜಟಿಲ ಪರೀಕ್ಷೆಯ ಸಮಯದಲ್ಲಿ ತಂಡದ ಆರೂ ಸದಸ್ಯರೂ ಮಗ್ನರಾಗಿದ್ದರಾಗಲೇ ನೈಟ್ರಿಕ್ ಆಸಿಡ್ ಟ್ಯಾಂಕ್ ಸಿಡಿಯಿತು. ಅವರೆಲ್ಲ ಗಂಭೀರವಾಗಿ ಗಾಯ ಗೊಂಡರು. ಶರೀರದಲ್ಲಿ ಸುಟ್ಟ ಗಾಯಾಳುಗಳುಂಟಾದ ಅವರನ್ನು ಆಸ್ಪತ್ರೆಗೆ ಒಯ್ಯಲಾಯಿತು. ತಂಡದ ಮುಖ್ಯಸ್ಥ ಅಬ್ದುಲ್ ಕಲಾಂ ಹಾಗೂ ಅವರ ಮುಖ್ಯ ಜತೆಗಾರ ಡಾ. ಕುರೂಪ್ ಚಿಂತಾಮಗ್ನರಾಗಿ ರಾತ್ರಿಯಿಡೀ ಗಾಯಾಳುಗಳೊಡನೆ ಇದ್ದರು.

ಗಾಯಾಳುಗಳಲ್ಲೊಬ್ಬರಾದ ಶ್ರೀರಾಮಕೃಷ್ಣನ್ ನಾಯರ್‌ಗೆ ಬೆಳಗಿನ ಜಾವ 3 ಗಂಟೆಗೆ ಪ್ರಜ್ಞೆಬಂತು. ಅವರ ಬಾಯಿಂದ ಹೊರಟ ಮೊದಲಮಾತೇ 'ಅಯ್ಯೋ ಹೀಗಾಯಿತಲ್ಲಾ' ಎಂದು ತನಗಾದ ಸುಟ್ಟ ಗಾಯಕ್ಕಿಂತ ಉಡಾವಣೆ ವಿಳಂಬವಾಯಿತೆಂಬ ದುಃಖ ಅವರಿಗೆ. ಆ ಗಂಭೀರ ಸ್ಥಿತಿಯಲ್ಲೂ ಅವರು ದುರ್ಘಟನೆಯ ಕಾರಣದಿಂದ ಉಡಾವಣೆ ತಡವಾಗಿದೆ. ತಕ್ಷಣವೇ ಅದನ್ನು ಸರಿಮಾಡಿ ಉಡಾಯಿಸುತ್ತೇವೆ. ಎಂಬ ಭರವಸೆಯನ್ನು ಡಾ. ಕಲಾಂರಿಗೆ ನೀಡಿದರು. ಅತ್ಯಂತ ಗಂಭೀರ ಪರಿಸ್ಥಿತಿಯಲ್ಲೂ ಕೆಲಸದ ಕುರಿತು ಅವರ ಚಿಂತೆ ಹಾಗೂ ಶ್ರದ್ಧೆ ವಿಶ್ವಾಸಗಳು ಎಲ್ಲರ ಹೃದಯವನ್ನು ಕಲಕಿದುವು. ■

Reg. No. RNI 45459/85
CPMG/KA/BGS-126/2012-14
Posted at Bangalore GPO
Bangalore - 560 001

APRIL 2013
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ "ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ" ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavanuruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com